# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ, ಚಿಕ್ಕಮಗಳೂರು, ತುಮಕೂರು, ಗದಗ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಶುಕ್ರವಾರ, ಏಪ್ರಿಲ್ 14, 2023

ಸಂಪುಟ : 49 ಸಂಚಿಕೆ : 332 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com

















# ಪ್ರಾಮಾಣಿಕತೆ ಮೆರೆದ ಆಟೋ ಚಾಲಕ





ಮಲೇಬೆನ್ನೂರು, ಏ. 13 - ರಸ್ತೆಯಲ್ಲಿ ಸಿಕ್ಕ ಬ್ಯಾಗ್‌ನಲ್ಲಿದ್ದ 100 ಗ್ರಾಂ ಬಂಗಾರದ ಒಡವೆಗಳನ್ನು ಮಲೇಬೆನ್ನೂರು ಪೊಲೀಸ್ ಠಾಣೆಗೆ ಒಪ್ಪಿಸುವುದರ ಮೂಲಕ ಹಾಲಿವಾಣದ ಆಟೋ ಚಾಲಕ ವಿಜಯ ಕುಮಾರ್ ಎಂಬಾತ ಪ್ರಾಮಾಣಿಕತೆ ಮೆರೆದಿದ್ದಾರೆ.

ಹೊನ್ನಾಳಿಯ ಶಕೀಲ್ ಎಂಬಾತ ಕುಟುಂಬದವರ ಜೊತೆ ಕಾರ್‌ನಲ್ಲಿ ಹುಬ್ಬಳ್ಳಿಯಿಂದ ಹೊನ್ನಾಳಿಗೆ ತೆರಳುತ್ತಿರುವಾಗ ಗೊತ್ತಿಲ್ಲದಂತೆ ಅವರ ಬ್ಯಾಗ್ ಹಾಲಿವಾಣ ಕ್ರಾಸ್ ಬಳಿ ಬಿದ್ದಿದೆ. ಇದೇ ವೇಳಗೆ ಈ ರಸ್ತೆಯಲ್ಲಿ ಆಗಮಿಸಿದ ಹಾಲಿವಾಣದ ಆಟೋ ಚಾಲಕನಿಗೆ ರಸ್ತೆಯಲ್ಲಿ ಬಿದ್ದಿದ್ದ ಬ್ಯಾಗ್ ಸಿಕ್ಕಿದೆ.

ಬ್ಯಾಗ್ ತೆಗೆದು ನೋಡಿದಾಗ ಬಂಗಾರದ ಒಡವೆಗಳು ಕಂಡಿವೆ, ತಕ್ಷಣ ಆಟೋ ಚಾಲಕ ವಿಜಯಕುಮಾರ್ ಅವರು ನೇರವಾಗಿ ಪೊಲೀಸ್ ಠಾಣೆಗೆ ತೆರಳಿ ಸಿಕ್ಕ ಬ್ಯಾಗ್ ಅನ್ನು ಪಿಎಸ್‌ಐ ಪ್ರಭು ಕೆಳಗಿನ ಮನಿ ಅವರಿಗೆ ಒಪ್ಪಿಸಿದ್ದಾನೆ.

ಇದಾದ ಸ್ವಲ್ಪ ಹೊತ್ತಿನಲ್ಲಿಯೇ ಬ್ಯಾಗ್ ಕಳೆದುಕೊಂಡಿದ್ದ ಹೊನ್ನಾಳಿಯ ಶಕೀಲ್ ಅವರು ದೂರು ನೀಡಲು ಪೊಲೀಸ್ ಠಾಣೆಗೆ ಆಗಮಿಸಿದ್ದಾರೆ.

ವಿಚಾರಣೆ ನಂತರ ಆಟೋ ಚಾಲಕ ವಿಜಯ ಕುಮಾರ್‌ಗೆ ಸಿಕ್ಕ ಬ್ಯಾಗ್ ಶಕೀಲ್ ಅವರಿಗೆ ಸೇರಿದ್ದನ್ನು ಧೃಡಿಪಡಿಸಿಕೊಂಡು ಬಂಗಾರದ ಒಡವೆಗಳಿದ್ದ ಬ್ಯಾಗ್ ಅನ್ನು ಪೊಲೀಸರು ಶಕೀಲ್‌ಗೆ ನೀಡಿದರು.

ಆಟೋ ಚಾಲಕ ವಿಜಯಕುಮಾರ್ ಅವರ ಪ್ರಮಾಣಿಕತೆಯನ್ನು ಪ್ರಶಂಸಿದ ಪಿಎಸ್‌ಐ ಪ್ರಭು ಕೆಳಗಿನ ಮನೆ, ಪಿಎಸ್‌ಐ ಯುವರಾಜ್ ಕಂಬಳಿ ಅವರು ವಿಜಯಕುಮಾರ್ ಅವರನ್ನು ಸನ್ಮಾನಿಸಿ ಅಭಿನಂದಿಸಿದರು.

ಶಕೀಲ್ ಕೂಡಾ ವಿಜಯಕುಮಾರ್ ಅವರಿಗೆ ಕೃತಜ್ಞತೆ ಸಲ್ಲಿಸಿ ಪ್ರೀತಿಯ ಕೊಡುಗೆ ನೀಡಿದರು.

# ಅಂತರಂಗ, ಬಹಿರಂಗ ಶುದ್ಧಿಯಿಂದ ಭಗವಂತನೊಲುಮೆ ಸಾಧ್ಯ

## ಸಾಣೇಹಳ್ಳಿಯಲ್ಲಿನ ಮಕ್ಕಳ ಹಬ್ಬ ಉದ್ಘಾಟನಾ ಕಾರ್ಯಕ್ರಮದಲ್ಲಿ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ

ಸಾಣೇಹಳ್ಳಿ, ಏ.13- ದೇವರನ್ನು ಒಲಿಸಲು ಪೂಜೆ, ಪುನಸ್ಕಾರ, ಗುಡಿಗುಂಡಾರಗಳಿಗೆ ಹೋಗುವ ಅಗತ್ಯವಿಲ್ಲ; ಬಸವಣ್ಣನವರು ಹೇಳಿದಂತೆ ಅಂತರಂಗ ಶುದ್ಧಿ ಮತ್ತು ಬಹಿರಂಗ ಶುದ್ಧಿಯಾದರೆ ಸಾಕು ಎಂದು ಸಾಣೇಹಳ್ಳಿ ಡಾ. ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಸಾಣೇಹಳ್ಳಿಯ ಹುಣಸೇಮರ ಬಯಲು ರಂಗಮಂದಿರದಲ್ಲಿ ಶ್ರೀ ಶಿವಕುಮಾರ ಕಲಾಸಂಘ ಆಯೋಜಿಸಿರುವ ಮಕ್ಕಳ ಹಬ್ಬದ ಉದ್ಘಾಟನಾ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಇಂದು ಜನರಲ್ಲಿ ಅಂತರಂಗ ಮತ್ತು ಬಹಿರಂಗ ಶುದ್ಧಿಯನ್ನು ಕಾಣಲು ಸಾಧ್ಯವಿಲ್ಲದಂತಾಗಿದೆ. ವ್ಯಕ್ತಿಯ ನಡವಳಿಕೆಗಳು ಬದಲಾವಣೆಯಾದರೆ ಮಾತ್ರ ವ್ಯಕ್ತಿತ್ವ ಅರಳಲು ಸಾಧ್ಯ. ಇಂದಿನ ಮಕ್ಕಳು ಬುದ್ಧಿವಂತರಾಗಿರುವಂತೆ ತುಂಟರೂ ಹೌದು. ತುಂಟತನ ಸಕಾರಾತ್ಮಕವಾಗಿ, ಕ್ರಿಯಾಶೀಲವಾಗಿರಬೇಕೇ ಹೊರತು ಪೋಷಕರಿಗೆ, ಇತರರಿಗೆ ಹಾನಿಯನ್ನುಂಟು ಮಾಡುವಂತಿರಬಾರದು ಎಂದು ಶ್ರೀಗಳು ಹೇಳಿದರು.

ಮಕ್ಕಳು ಹೆಚ್ಚು ಹೆಚ್ಚು ದುಶ್ಚಟಗಳ ದಾಸರಾಗುತ್ತಿರುವುದು ಕಳವಳಕಾರಿ ಸಂಗತಿ. ಮುಕ್ತವಾಗಿ, ಸ್ವಚ್ಛವಾಗಿ, ಪಾರದರ್ಶಕವಾಗಿ ಬದುಕುವ ಗುಣವನ್ನು ಮೈಗೂಡಿಸಿಕೊಳ್ಳಬೇಕು. ಜಾತಿ, ಮತ, ದೇಶ, ಭಾಷೆಗಳ ಭಿನ್ನತೆಯನ್ನು ತೊರೆದು ಪರಸ್ಪರ ಪ್ರೀತಿಸುವ ಗುಣವನ್ನು ಬೆಳೆಸುವ ಉದ್ದೇಶ ಈ ಶಿಬಿರದ್ದು.

ಹಣ ಗಳಿಸುವುದು ಮುಖ್ಯವಲ್ಲ; ಸರಳವಾಗಿ ಬದುಕುವುದು, ಸ್ವಾವಲಂಬಿಯಾಗಿ ಬದುಕುವುದು ಬಹಳ ಮುಖ್ಯ. ಸರಳತೆ ಬದುಕಿನ ಉಸಿರಾಗಬೇಕು ಎಂದರು.



ಮಕ್ಕಳ ಹಬ್ಬ ಶಿಬಿರವನ್ನು ಡೋಲು ಭಾರಿಸುವ ಮೂಲಕ ಉದ್ಘಾಟಿಸಿದ ನಾಟಕಕಾರ ಡಾ. ಕೆ.ವೈ. ನಾರಾಯಣಸ್ವಾಮಿ ಮಾತನಾಡಿ, ಕಳೆದ 27 ವರ್ಷಗಳಿಂದ ಸಾಣೇಹಳ್ಳಿಯಲ್ಲಿ ನಡೆಯುತ್ತಿರುವ 'ಮಕ್ಕಳ ಹಬ್ಬ' ಮಕ್ಕಳ ರಂಗಭೂಮಿಯನ್ನು ವಿಸ್ತಾರವಾಗಿ ಬೆಳೆಸಿದೆ. ಇದುವರೆಗೆ ಸುಮಾರು 50 ನಾಟಕಗಳನ್ನು ಪ್ರದರ್ಶಿಸಿದೆ. ಸಾವಿರಾರು ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಾಸಗೊಂಡಿದೆ. ಕಥೆ, ಕವನಗಳಿಲ್ಲದೆ ಮಕ್ಕಳ ಮನಸ್ಸನ್ನು ಗೆಲ್ಲುವುದು ಕಷ್ಟಕರ ಕೆಲಸ. ಕಥೆ, ಹಾಡುಗಳು ಇಲ್ಲದೇ ಇರುವ ಜೀವನದಲ್ಲಿ ಸಂತೋಷವೂ ಇರುವುದಿಲ್ಲ. ಮಕ್ಕಳಿಗೆ ಸಂತೋಷದಾಯಕ ಬಾಲ್ಯ ಸಿಗುವುದು ಪರಿಸರದೊಡನೆ ಬೆಸೆದುಕೊಂಡಾಗ ಮಾತ್ರ ಸಾಧ್ಯ ಎಂದು ಸಾರಿದವರು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಶಿವರಾಮ ಕಾರಂತರು. ಬಾಲ ವನ ಎನ್ನುವ ಪ್ರಾಯೋಗಿಕ ಶಾಲೆಯನ್ನು ಅವರು ತೆರೆದಿದ್ದರು. ಅದರಿಂದ ಪ್ರೇರಣೆಗೊಂಡ ಅನೇಕರು ಬೇಸಿಗೆ ಶಿಬಿರಗಳನ್ನು ಶುರು ಮಾಡಿದರು. ಆದರೆ ಅದರಲ್ಲಿ ಹಲವು ವ್ಯಾವಹಾರಿಕವಾಗಿರುವುದು ದುರದೃಷ್ಟಕರ ಸಂಗತಿ.

ಮಕ್ಕಳು ಇಂದು ಶಾಲೆ, ಮನೆಗಳಲ್ಲಿ ಬಂಧಿಯಾಗಿದ್ದಾರೆ. ಟಿವಿ ಮೂಲಕ ಪ್ರಾಣಿಗಳನ್ನು ನೋಡುವ ದುಃಸ್ಥಿತಿ ಬಂದಿದೆ. ಪರಿಸರದ ಜೊತೆ ಸಹಜ ಅನುಭವವನ್ನು ಹೊಂದುವ ಶಿಕ್ಷಣ ನಮಗೆ ಇಂದು ಬೇಕಾಗಿದೆ. ಇದರ ಪ್ರಯೋಗವನ್ನು ಸಾಣೇಹಳ್ಳಿಯಲ್ಲಿ ಪಂಡಿತಾರಾಧ್ಯ ಶ್ರೀಗಳು ಮಕ್ಕಳ ಹಬ್ಬದ ಮೂಲಕ ನೀಡುತ್ತಿರುವುದು ಶ್ಲಾಘನೀಯ ಸಂಗತಿ. ಚಾರ್ಲಿ ಚಾಪ್ಲಿನ್ ಮಕ್ಕಳಿಗಾಗಿ ಅನೇಕ ಸಿನೆಮಾ ಮಾಡಿದ್ದಾರೆ. ಆ ಕಾರಣಕ್ಕಾಗಿ ಅವರು ಸದಾ ಸ್ಮರಣೀಯರು. ಮಕ್ಕಳ ಬಾಲ್ಯ ಕಳೆದು ಹೋಗದಿರಲಿ ಮತ್ತು ಇದುವರೆಗೆ ಇಲ್ಲದೇ ಇರುವ ಬಾಲ್ಯ ಮತ್ತೆ ಹಿಂದಿರುಗಿ ಬರಲಿ ಎಂದು ಆಶಿಸಿದರು.

ಸಂಗೀತ ಶಿಕ್ಷಕ ಹೆಚ್.ಎಸ್. ನಾಗರಾಜ್ ವಚನಗೀತೆ ಮತ್ತು ಪ್ರೇರಣಾದಾಯಕ ಗೀತೆಗಳನ್ನು ಹಾಡಿದರು. ನಟರಾಜ್ ಹೊನ್ನವಳ್ಳಿ ಸ್ವಾಗತಿಸಿದರು. ಹೆಚ್.ಎಸ್. ದ್ಯಾಮೇಶ್ ಪ್ರಾಸ್ತಾವಿಕ ಮಾತುಗಳನ್ನಾಡಿದರು. ರಾಜು ಕಾರ್ಯಕ್ರಮ ನಿರೂಪಿಸಿದರು. ವೇದಿಕೆಯ ಮೇಲೆ ರಂಗಶಾಲೆಯ ಪ್ರಾಚಾರ್ಯರಾದ ಶ್ವೇತಾರಾಣಿ ಇದ್ದರು.

ಕಾರ್ಯಕ್ರಮದ ನಂತರ ಡಾ. ಕೆ.ವೈ. ನಾರಾಯಣ ಸ್ವಾಮಿ ರಚಿಸಿದ, ಶ್ವೇತಾರಾಣಿ ಮತ್ತು ವಿನೀತ್ ಕುಮಾರ್ ನಿರ್ದೇಶಿಸಿದ, ರಂಗಶಾಲೆಯ ವಿದ್ಯಾರ್ಥಿಗಳು ಅಭಿನಯಿಸಿದ ಅಕ್ಕಮಹಾದೇವಿ ಕುರಿತ 'ನೀವು ಕಾಣಿರೇ' ನಾಟಕ ಪ್ರದರ್ಶನಗೊಂಡಿತು.

# ಭರಮಸಾಗರ : ಗ್ರಾಮೀಣ ಸಮಸ್ಯೆಗಳ ಪರಿಹರಿಸಲು ಪ್ರಾಮಾಣಿಕ ಪ್ರಯತ್ನ



**ಮಾಜಿ ಶಾಸಕ ಎಂ. ಚಂದ್ರಪ್ಪ**

ಭರಮಸಾಗರ, ಏ. 13- ನಾನು ನಿಮ್ಮ ಮನೆಯ ಮಗನಂತೆ. ಕ್ಷೇತ್ರದ ಪ್ರತಿಯೊಂದು ಗ್ರಾಮದಲ್ಲಿನ ಸಮಸ್ಯೆಗಳನ್ನು ಪರಿಗಣಿಸಿ ಪರಿಹರಿಸುವ ಪ್ರಾಮಾಣಿಕ ಪ್ರಯತ್ನ ಮಾಡಿರುತ್ತೇನೆ ಎಂದು ಮಾಜಿ ಶಾಸಕ ಎಂ. ಚಂದ್ರಪ್ಪ ಹೇಳಿದರು.

ಹೊಳಲ್ಕೆರೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಸಿರಿಗೆರೆ ಮತ್ತು ಭರಮಸಾಗರ ಗ್ರಾಮಗಳಲ್ಲಿ ಬಿರುಸಿನ ಮತ ಪ್ರಚಾರ ನಡೆಸಿದ ಸಂದರ್ಭದಲ್ಲಿ ಮಾತನಾಡಿದರು.

ಗ್ರಾಮಗಳಲ್ಲಿ ಸಿಮೆಂಟ್ ರಸ್ತೆಗಳನ್ನು ನಿರ್ಮಿಸಿದ್ದು, ಓವರ್ ಹೆಡ್ ಟ್ಯಾಂಕ್, 600 ಕೋಟಿ ರೂ. ವೆಚ್ಚದಲ್ಲಿ ಕೆರೆಕಟ್ಟೆಗಳನ್ನು ನಿರ್ಮಾಣ ಮಾಡಲಾಗಿದೆ. ರೈತರು ಅನುಭವಿಸುತ್ತಿದ್ದ ವಿದ್ಯುತ್ ಸಮಸ್ಯೆಯನ್ನು ಕಂಡು 220 ಕೋಟಿ ರೂ. ವೆಚ್ಚದಲ್ಲಿ ಅಜ್ಜಪ್ಪನಹಳ್ಳಿ ಬಳಿ ಪವರ್ ಸ್ಟೇಷನ್ ನಿರ್ಮಿಸಲಾಗಿದೆ ಎಂದರು.

5 ಕೋಟಿ ರೂ. ವೆಚ್ಚದಲ್ಲಿ ಚೆಕ್ ಡ್ಯಾಮ್ ನಿರ್ಮಿಸಿದ್ದರಿಂದ ಕೊಳವೆ ಬಾವಿಗಳಲ್ಲಿ ಅಂತರ್ಜಲ ಹೆಚ್ಚಾಗಿದೆ. ಇದರಿಂದ ರೈತರು ತೋಟಗಳನ್ನು ಮಾಡಿಕೊಳ್ಳಲು ಅನುಕೂಲವಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮುಖಂಡರಾದ ಡಿ.ವಿ. ಶರಣಪ್ಪ, ಶೈಲೇಶ್ ಕುಮಾರ್, ಕೊಗುಂಡೆ ಮಂಜಣ್ಣ, ಪ್ರವೀಣ್ ಕುಮಾರ್, ಪ್ರದೀಪ್ ಕುಮಾರ್, ಕಲ್ಲೇಶ್, ಸಿರಿಗೆರೆಯ ಮೋಹನ್, ಎ.ಎಸ್. ಸಿದ್ಧಲಿಂಗಪ್ಪ, ಅನಂತಪದ್ಮನಾಭರಾವ್, ಕೊಗುಂಡೆ ಪ್ರಭು, ಹೊಳಲ್ಕೆರೆ ಬಿಜೆಪಿ ಮಹಿಳಾ ಮೋರ್ಚಾ ಪ್ರಧಾನ ಕಾರ್ಯದರ್ಶಿ ರೂಪಾ ಸುರೇಶ್, ಮಹಿಳಾ ಸಂಘಟಕಿ ಲೋಲಾಕ್ಷಮ್ಮ ಮತ್ತು ಇತರರು ಪ್ರಚಾರದಲ್ಲಿ ತೊಡಗಿದ್ದರು.

## ನಗರದಲ್ಲಿಂದು ಭೀಮ್ ಸೇನೆ ಪಥಸಂಚಲನ

ದಾವಣಗೆರೆ, ಏ.13- ರಾಷ್ಟ್ರೀಯ ನಾಯಕ, ಸಂವಿಧಾನ ಶಿಲ್ಪಿ ಡಾ.ಬಿ. ಆರ್ ಅಂಬೇಡ್ಕರ್ ಜಯಂತಿಯನ್ನು ಕರ್ನಾಟಕ ಭೀಮ್ ಸೇನೆ ಜಿಲ್ಲಾ ಸಮಿತಿ ವತಿಯಿಂದ ನಾಳೆ ದಿನಾಂಕ 14 ರ ಶುಕ್ರವಾರ ನಗರದ ಪ್ರಮುಖ ವೃತ್ತ ಹಾಗೂ ರಸ್ತೆಗಳ ಮೂಲಕ ಮೆರವಣಿಗೆ ನಡೆಸಿ ಆಚರಿಸಲು ಉದ್ದೇಶಿಸಲಾಗಿದ್ದು, ವಿವಿಧ ಸಂಘಟನೆಗಳ ಮುಖಂಡರು ಸಹಕರಿಸುವಂತೆ ಸೇನೆ ಜಿಲ್ಲಾಧ್ಯಕ್ಷ ಸೂರ್ಯಪ್ರಕಾಶ್ ಆರ್. ಮನವಿ ಮಾಡಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಿಗ್ಗೆ 8 ಗಂಟೆಯಿಂದ 9.30 ರವರೆಗೆ ನಗರದ ಅಂಬೇಡ್ಕರ್ ವೃತ್ತ, ಜಯದೇವ ವೃತ್ತ, ಗಾಂಧೀ ವೃತ್ತ, ಪಿ.ಬಿ ರಸ್ತೆ, ಎವಿಕೆ ಕಾಲೇಜ್ ರಸ್ತೆ, ನಾಯಕರ ಹಾಸ್ಟೆಲ್ ರಸ್ತೆ ಮಾರ್ಗವಾಗಿ ಸಂಚರಿಸಿ ಅಂಬೇಡ್ಕರ್ ಭಾವಚಿತ್ರದೊಂದಿಗೆ, ಮಂಗಳಮುಖಿಯರು, ದಮನಿತ ಮಹಿಳೆಯರು, ವಿವಿಧ ಸಂಘಟನೆಯ ಪದಾಧಿಕಾರಿ ಗಳು, ಮುಖಂಡರುಗಳು, ಶಾಲಾ ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಸಂತೋಷ್ ಎಂ, ರಮೇಶ್ ಆರ್, ರಾಘವೇಂದ್ರ ಕೆ ಮತ್ತಿತರರಿದ್ದರು.

## ಹರಪನಹಳ್ಳಿ ವಿಧಾನಸಭಾ ಕ್ಷೇತ್ರಕ್ಕೆ ಬಿಜೆಪಿ ಅಭ್ಯರ್ಥಿಯಾಗಿ ಶಾಸಕ ಜಿ.ಕರುಣಾಕರ ರೆಡ್ಡಿ



ಹರಪನಹಳ್ಳಿ, ಏ.13- ಹರಪನಹಳ್ಳಿ ವಿಧಾನಸಭಾ ಕ್ಷೇತ್ರಕ್ಕೆ ಬಿಜೆಪಿ ಅಭ್ಯರ್ಥಿಯಾಗಿ ಶಾಸಕ ಜಿ.ಕರುಣಾಕರ ರೆಡ್ಡಿ ನಾಲ್ಕನೇ ಬಾರಿಗೆ ಟಿಕೆಟ್ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ. ಬಿಜೆಪಿಯು ಎರಡನೇ ಪಟ್ಟಿ ಬಿಡುಗಡೆ ಮಾಡಿದ್ದು, ಹರಪನಹಳ್ಳಿ ವಿಧಾನ ಸಭಾ ಕ್ಷೇತ್ರಕ್ಕೆ ಹಾಲಿ ಶಾಸಕ ಗಾಲಿ ಕರುಣಾಕರ ರೆಡ್ಡಿ ಹೆಸರನ್ನು ಘೋಷಣೆ ಮಾಡಿದೆ. ಈ ಬಾರಿ ಬಿಜೆಪಿಯಲ್ಲಿ ಸ್ಥಳೀಯರಿಗೆ ಟಿಕೆಟ್ ನೀಡಬೇಕೆಂಬ ಕೂಗು ಮುಖಂಡರಲ್ಲಿ ಕೇಳಿ ಬಂದಿತ್ತು. ಆದರೆ ಇದ್ಯಾವುದಕ್ಕೂ ಬಿಜೆಪಿ ಮನ್ನಣೆ ನೀಡದೇ ಅಂತಿಮವಾಗಿ ಕರುಣಾಕರ ರೆಡ್ಡಿಯವರಿಗೆ ಟಿಕೆಟ್ ಘೋಷಣೆ ಮಾಡಿದೆ.

# ಕೊಟ್ಟೂರು : ಕಾಲ್ನಡಿಗೆಯಲ್ಲಿ ಮತದಾನ



ಕೊಟ್ಟೂರು, ಏ. 13 - ತಾಲ್ಲೂಕು ಆಡಳಿತ, ತಾಲ್ಲೂಕು ಪಂಚಾಯಿತಿ ಹಾಗೂ ಪಟ್ಟಣ ಪಂಚಾಯಿತಿ, ತಾಲ್ಲೂಕು ಸ್ವೀಪ್ ಸಮಿತಿ ಸಹಯೋಗದಲ್ಲಿ ಮತದಾರರ ಪಟ್ಟಿಯಲ್ಲಿ ಹೆಸರು ನೋಂದಣಿ, ಮತದಾನ ಅಭಿಯಾನದ ಅಂಗವಾಗಿ ಉಜ್ಜಿನಿ ವೃತ್ತದಿಂದ ಬಸ್ ನಿಲ್ದಾಣದ ವರೆಗೆ ಕಾಲ್ನಡಿಗೆ ಜಾಗೃತಿ ಜಾಥಾ ನಡೆಸಲಾಯಿತು.

ಮಂಗಳವಾರ ಸಂಜೆ ಕಾಲ್ನಡಿಗೆ ಜಾಥಾಕ್ಕೆ ತಹಸೀಲ್ದಾರ್ ಎಂ.ಕುಮಾರಸ್ವಾಮಿ ಅವರು ಚಾಲನೆ ನೀಡಿದ್ದರು. ಬಳಿಕ ಮಾತನಾಡಿದ ಅವರು, 18 ವರ್ಷ ಮೇಲ್ಪಟ್ಟ ಎಲ್ಲರೂ ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸಿಕೊಳ್ಳಬೇಕು.

ಮತದಾನ ಮಾಡುವುದು ಪ್ರತಿಯೊಬ್ಬ ಮತದಾರನ ಆದ್ಯ ಕರ್ತವ್ಯವಾಗಿದೆ. ಮತದಾನದ ದಿನದಂದು ತಪ್ಪದೇ ಮತ ಚಲಾಯಿಸಬೇಕು. ಯಾವುದೇ ಕಾರಣಕ್ಕೂ ಮತದಾನದಿಂದ ದೂರ ಉಳಿಯಬಾರದು. ದೇಶದ ಉಜ್ವಲ ಭವಿಷ್ಯಕ್ಕಾಗಿ ಎಲ್ಲರೂ ತಪ್ಪದೇ ಮತದಾನ ಮಾಡಬೇಕು ಎಂದು ಹೇಳಿದರು.

ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ನಸುರುಲ್ಲಾ ಮಾತನಾಡಿದರು. ಪಟ್ಟಣದ ಗಾಂಧಿ ವೃತ್ತದ ಬಳಿ ಮಾನವ ಸರಪಳಿ ನಿರ್ಮಿಸಿ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

ಈ ಸಂದರ್ಭದಲ್ಲಿ ಪಿಎಸ್ ಐ ವೆಂಕಟೇಶ್. ತಾಲ್ಲೂಕು ಸ್ವೀಪ್ ಸಮಿತಿ ನೋಡಲ್ ಅಧಿಕಾರಿ ಮೈದೂರು ಶಶಿಧರ್, ಮ್ಯಾನೇಜರ್ ಪುಷ್ಪಲತಾ, ಸ್ವ ಸಹಾಯ ಸಂಘದ ಸದಸ್ಯರಾದ ಭಾಗ್ಯಲಕ್ಷ್ಮಿ, ಅನ್ನಪೂರ್ಣ ಬೋಸ್, ಚಂಪಾಕ್ಷಿ, ಪೂರ್ಣಿಮ, ಹಾಗು ಅಂಗನವಾಡಿ ಮೇಲ್ವಿಚಾರಕಿ ಶ್ರೀಮತಿ ಅನ್ನಪೂರ್ಣಮ್ಮ, ಆಶಾಕಾರ್ಯಕರ್ತರು, ಧರ್ಮಸ್ಥಳ ಮಹಿಳಾ ಸಂಘದ ಸದಸ್ಯರು ವಿಕಲಚೇತನರು, ಪಟ್ಟಣ ಪಂಚಾಯಿತಿ ಸಿಬ್ಬಂದಿ, ಪೌರಕಾರ್ಮಿಕರು, ತಾಲ್ಲೂಕು ಆಡಳಿತ ಕಚೇರಿಯ ಸಿಬ್ಬಂದಿ, ತಾಲ್ಲೂಕು ಪಂಚಾಯಿತಿ ಸಿಬ್ಬಂದಿ, ಪೊಲೀಸ್ ಸಿಬ್ಬಂದಿ ಪಾಲ್ಗೊಂಡಿದ್ದರು.

## ಭರಮಸಾಗರದಲ್ಲಿ ಇಂದು ಗ್ರಾಮದೇವತೆ ಸಿಡಿ ಉತ್ಸವ

ಗ್ರಾಮ ದೇವತೆ ಶ್ರೀ ದುರ್ಗಾಂಬಿಕಾ ದೇವಿ ಜಾತ್ರೆ ಮಹೋತ್ಸವದಲ್ಲಿ ಇಂದು ವಿವಿಧ ವಾದ್ಯಗಳ ಮೂಲಕ ದೇವಿಯನ್ನು ಗ್ರಾಮದ ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ನಂತರ ಸಂಜೆ ಸಿಡಿ ಉತ್ಸವ ನಡೆಯುತ್ತದೆ. ನಾಡಿದ್ದು ದಿನಾಂಕ 15ನೇ ಶನಿವಾರ ಬೆಳಿಗ್ಗೆ 10.30ಕ್ಕೆ ಅಗ್ನಿಕುಂಡ ನಂತರ ಮಹಾಮಂಗಳಾರತಿಯೊಂದಿಗೆ ಜಾತ್ರಾ ಮಹೋತ್ಸವ ಕೊನೆಗೊಳ್ಳುವುದು.

## ತಳ ಸಮುದಾಯಕ್ಕೆ ಟಿಕೆಟ್ ನೀಡಿಲ್ಲ: ಬಿಜೆಪಿ ಆಕಾಂಕ್ಷಿ ಮಹೇಶ್ ಅಸಮಾಧಾನ

**ಹೊನ್ನಾಳಿ**

ಹೊನ್ನಾಳಿ, ಏ.13- ಭಾರತೀಯ ಜನತಾ ಪಕ್ಷದಿಂದ ಜಿಲ್ಲೆಯೊಳಗೆ ಎಲ್ಲೂ ತಳ ಸಮುದಾಯದವರಿಗೆ ಟಿಕೆಟ್ ನೀಡದೇ ಬರೀ ಮೇಲ್ವರ್ಗದವರಿಗೆ ಮಾತ್ರ ಟಿಕೆಟ್ ನೀಡಲಾಗಿದೆ ಎಂದು ಬಿಜೆಪಿ ಟಿಕೆಟ್ ಆಕಾಂಕ್ಷಿ ಎಂ.ಆರ್. ಮಹೇಶ್ ಅಸಮಾಧಾನ ವ್ಯಕ್ತಪಡಿಸಿದರು.


ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಬಿಜೆಪಿಯಿಂದ ಹೊನ್ನಾಳಿ ವಿಧಾನಸಭಾ ಕ್ಷೇತ್ರಕ್ಕೆ ಅರ್ಜಿ ಹಾಕಿದ್ದೆ. ಕೊನೆ ಗಳಿಗೆಯಲ್ಲಿ ನನ್ನ ಹೆಸರನ್ನು ಕೈಬಿಟ್ಟಿದ್ದಾರೆ. ಹೊನ್ನಾಳಿ ಕ್ಷೇತ್ರದಿಂದ 4ನೇ ಬಾರಿ ಟಿಕೆಟ್ ಕೊಡುವುದನ್ನು ತಪ್ಪಿಸಿದ್ದಾರೆ ಎಂದರು. ಜಿಲ್ಲೆಯಲ್ಲಿ ಕುರುಬ ಸಮಾಜ, ಕುಂಬಾರ ಸಮಾಜ, ಉಪ್ಪಾರ, ಬಣಜಾರ ಸೇರಿದಂತೆ ಕೆಳ ಸಮುದಾಯಕ್ಕೆ ಅನ್ಯಾಯವಾಗಿದೆ. ಮೂಡಿಗೆರೆ, ಹಾವೇರಿ, ಶಿವಮೊಗ್ಗದ ಶಾಸಕರುಗಳಿಗೆ ಟಿಕೆಟ್ ತಪ್ಪಿಸಿದ್ದಾರೆ. ಲೋಕಾಯುಕ್ತ ಕೇಸಿನಲ್ಲಿದ್ದರೂ ನಿಯಮ ಗಾಳಿಗೆ ತೂರಿ ರೇಣುಕಾಚಾರ್ಯರಿಗೆ ಟಿಕೆಟ್ ನೀಡಲಾಗಿದೆ ಎಂದು ಅವರು ಆರೋಪಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಕೊನಾಯಕನಹಳ್ಳಿ ಮಂಜುನಾಥ, ದೀಕ್ಷಿತ್, ಮಂಜು ಇತರರು ಇದ್ದರು.

## ಜೀವಂತ ಪ್ರಮಾಣ ಪತ್ರ ಸಲ್ಲಿಸಲು ಮಾಸಾಶನ ಕಲಾವಿದರಿಗೆ ಸೂಚನೆ

ದಾವಣಗೆರೆ, ಏ.13- ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಮಾಸಾಶನ ಪಡೆಯುತ್ತಿರುವ ಸಾಹಿತಿ ಮತ್ತು ಕಲಾವಿದರು ಜೀವಿತಾವಧಿ ಪ್ರಮಾಣ ಪತ್ರವನ್ನು ಇದೇ ದಿನಾಂಕ 25 ರೊಳಗಾಗಿ ಸಲ್ಲಿಸಬೇಕು. ಆಧಾರ್ ಕಾರ್ಡ್, ಪಿಂಚಣಿ ಪುಸ್ತಕದ ಪ್ರತಿ, ಇತ್ತೀಚಿನ ಭಾವಚಿತ್ರ ಮತ್ತು ಬ್ಯಾಂಕ್ ಪಾಸ್ ಬುಕ್‌ನೊಂದಿಗೆ ಜೀವಿತಾವಧಿ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಬ್ಯಾಂಕ್ ಮ್ಯಾನೇಜರ್ ಸಹಿ ಪಡೆದು ಜಿಲ್ಲಾಡಳಿತ ಭವನ ಕೊಠಡಿ ಸಂಖ್ಯೆ 27ರಲ್ಲಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಚೇರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗೆ 08192-234849ಕ್ಕೆ ಸಂಪರ್ಕಿಸಬಹುದು.

## ಶ್ರೀಮತಿ ಯಲ್ಲಮ್ಮಬಾಯಿ ಬನುಖಂಡಿ ನಿಧನ



ದಾವಣಗೆರೆ ಸಿಟಿ ಜಾಲಿನಗರ, 1ನೇ ಮೇನ್, 4ನೇ ಕ್ರಾಸ್ ಹತ್ತಿರದ ವಾಸಿ
ದಿ. ಕೃಷ್ಣೋಜಿರಾವ್ ಬನುಖಂಡಿ ಇವರ ಧರ್ಮಪತ್ನಿ
ತಿಲಕ್ ಡಿಜಿಟಲ್ ಸ್ಟುಡಿಯೋ ಮಾಲೀಕರಾದ ತಿಲಕ ಬನುಖಂಡಿ ಇವರ ತಾಯಿ

**ಶ್ರೀಮತಿ ಯಲ್ಲಮ್ಮಬಾಯಿ ಬನುಖಂಡಿ (76 ವರ್ಷ)**

ಇವರು ದಿನಾಂಕ 13.4.2023ರ ಗುರುವಾರ ರಾತ್ರಿ 10.12 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ನಾಲ್ವರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 14.04.2023ರ ಶುಕ್ರವಾರ ಮಧ್ಯಾಹ್ನ 1 ಗಂಟೆಗೆ ನಗರದ ಸಾರ್ವಜನಿಕ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ದು:ಖತಪ್ತ ಕುಟುಂಬ ವರ್ಗ :
ಮೊ : 98440 51770, 63618 75558, 99015 85050

# ಸಂಸ್ಕಾರ, ನಡವಳಿಕೆಗಳಿಗೆ ಜಾನಪದವೇ ಮೂಲಭೂತ ಬೇರಾಗಿದೆ

**ಸಿರಿಗೆರೆಯಲ್ಲಿ ಭಜನಾ ಮೇಳದ ಉದ್ಘಾಟನೆಯಲ್ಲಿ ಕರ್ನಾಟಕ ಜಾನಪದ ಅಕಾಡೆಮಿಯ ನಿಕಟ ಪೂರ್ವ ಸದಸ್ಯರಾದ ಹೆಚ್.ಎಸ್. ಪುಷ್ಪಲತಾ ಅಭಿಮತ**





ಸಿರಿಗೆರೆ, ಏ. 13 - ಸಂಸ್ಕಾರ, ನಡವಳಿಕೆಗಳಿಗೆ ಜಾನಪದವೇ ಮೂಲಭೂತ ಬೇರಾಗಿದೆ ಎಂದು ಸಾಗರದ ಕರ್ನಾಟಕ ಜಾನಪದ ಅಕಾಡೆಮಿಯ ನಿಕಟ ಪೂರ್ವ ಸದಸ್ಯರಾದ ಹೆಚ್.ಎಸ್. ಪುಷ್ಪಲತಾ ಅಭಿಪ್ರಾಯ ವ್ಯಕ್ತಪಡಿಸಿದರು.

ಇಲ್ಲಿನ ಗುರುಶಾಂತೇಶ್ವರ ದಾಸೋಹ ಮಂಟಪದಲ್ಲಿ ಅಣ್ಣನ ಬಳಗದ ವತಿಯಿಂದ ಮಂಗಳವಾರ ಜರುಗಿದ ಶ್ರೀ ಕಾಶಿ ಮಹಾಲಿಂಗ ಸ್ವಾಮೀಜಿಯವರ 52 ನೇ ಶ್ರದ್ಧಾಂಜಲಿ ಪ್ರಯುಕ್ತ ರಾಜ್ಯಮಟ್ಟದ 34 ನೇ ಭಜನಾ ಮೇಳ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಜನಪದ ಹಾಡುಗಳಲ್ಲಿ ಮಾನವೀಯ ಮೌಲ್ಯಗಳು ಜೀವಂತವಾಗಿವೆ. ಜಾತ್ರೆ ಹಾಗೂ ಗ್ರಾಮದ ವಿವಿಧ ಕಾರ್ಯಕ್ರಮಗಳಲ್ಲಿ, ಚರಿತ್ರೆ, ಪುರಾಣಗಳಲ್ಲಿ ಭಜನೆಗಳ ಪಾತ್ರ ಮುಖ್ಯವಾಗಿದೆ. ಆಧುನಿಕತೆಯಿಂದ ಜಾನಪದಕ್ಕೆ ಪೆಟ್ಟು ಬಿದ್ದಂತಾಗಿದೆ ಎಂದು ತಿಳಿಸಿದರು.

ಶ್ರೀ ಮಠದ ಪ್ರಧಾನ ಕಾರ್ಯದರ್ಶಿ ಪ್ರೊ. ಎಸ್.ಬಿ. ರಂಗನಾಥ್ ಮಾತನಾಡಿ, ಶ್ರೀ ಮಠದ 19ನೇ ಶ್ರೀಗಳಾದ ಶ್ರೀ ಗುರು ಶಾಂತದೇಶಿಕೇಂದ್ರ ಸ್ವಾಮೀಜಿ ಅವರು ಸಿರಿಗೆರೆಯಲ್ಲಿ ಮೊಟ್ಟಮೊದಲು ಶಾಲೆಗಳನ್ನು ಪ್ರಾರಂಭಿಸಿದರು. ನಂತರ ಶಿವಕುಮಾರ ಶ್ರೀಗಳು ಶಿಕ್ಷಣ ಕ್ರಾಂತಿ ನಡೆಸಿ 125 ಶಾಲೆಗಳನ್ನು ಸ್ಥಾಪನೆ ಮಾಡಿದ್ದರು. ನಂತರ ಬಂದ ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿಯವರು ಮಠದ ಕೀರ್ತಿಯನ್ನು ವಿಶ್ವದಾದ್ಯಂತ ವಿಸ್ತರಿಸಿ ಶಿಕ್ಷಣ, ವಿಜ್ಞಾನಕ್ಕೆ ಪ್ರೋತ್ಸಾಹ ನೀಡಿದರು. ಶ್ರೀಮಠದ ಪ್ರಗತಿಯಲ್ಲಿ ಕಾಶಿ ಮಹಾಲಿಂಗ ಸ್ವಾಮೀಜಿಯವರ ಪಾತ್ರ ಸಹ ದೊಡ್ಡದಾಗಿದ್ದು, ಪ್ರತಿ ವರ್ಷ ಶ್ರೀ ಮಠವು ಇವರ ನೆನಪಿಗಾಗಿ ಜನಪದ ಕಾರ್ಯಕ್ರಮಗಳನ್ನು ಮಾಡುತ್ತಾ ಬಂದಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಅಣ್ಣನ ಬಳಗದ ಅಧ್ಯಕ್ಷ ಬಿ.ಎಸ್. ಮರುಳಸಿದ್ದಯ್ಯ, ತೀರ್ಪುಗಾರರಾದ ಚಿತ್ರದುರ್ಗದ ಗಣೇಶಯ್ಯ, ಬಸಪ್ಪಜ್ಜ, ಸ್ವಾಮಿ ಹಾಗೂ ಭಜನಾ ತಂಡದವರು, ವಿದ್ಯಾರ್ಥಿಗಳು, ಗ್ರಾಮಸ್ಥರು ಇದ್ದರು.

## ಸಿಇಟಿ, ನೀಟ್: ಮಾಜಿ ಸೈನಿಕರ ಮಕ್ಕಳಿಗೆ ದೃಢೀಕರಣ ಪತ್ರ ಕಡ್ಡಾಯ

ದಾವಣಗೆರೆ, ಏ. 13- ಸಿ.ಇ.ಟಿ ಮತ್ತು ನೀಟ್‌ನ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಮಾಜಿ ಸೈನಿಕರ ಮಕ್ಕಳು ಮೀಸಲಾತಿ ಪಡೆಯಲು ಮಾಜಿ ಸೈನಿಕ ದೃಢೀಕರಣ ಪತ್ರವನ್ನು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯಿಂದ ಪಡೆಯುವುದು ಕಡ್ಡಾಯವಾಗಿದೆ. ಪ್ರಸ್ತುತ ಸರ್ಕಾರಿ ನೌಕರರು, ಅಧಿಕಾರಿಗಳನ್ನು ಚುನಾವಣಾ ಕಾರ್ಯಗಳಲ್ಲಿ ಬಳಸಿಕೊಳ್ಳಬಹುದಾದ ಕಾರಣಗಳಿಂದ ಸಿ.ಇ.ಟಿ, ನೀಟ್‌ನಲ್ಲಿ ಮೀಸಲಾತಿ ಕೋರಿರುವ ಎಲ್ಲಾ ಮಾಜಿ ಸೈನಿಕರು ಕೊನೆಯ ದಿನಾಂಕದವರೆಗೆ ಕಾಯದೇ ದೃಢೀಕರಣ ಪತ್ರವನ್ನು ಪಡೆದುಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ ಶಿವಮೊಗ್ಗ ಕಛೇರಿಯ ದೂರವಾಣಿ ಸಂಖ್ಯೆ 08182-220925 ಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

## ಅಕ್ಷಯ ತೃತೀಯಕ್ಕಾಗಿ ಜೋಯಾಲುಕ್ಕಾಸ್‌ನಿಂದ ಕ್ಯಾಶ್‌ಬ್ಯಾಕ್

ದಾವಣಗೆರೆ, ಏ. 13 – ಅಕ್ಷಯ ತೃತೀಯದ ಹಿನ್ನೆಲೆಯಲ್ಲಿ ಜೋಯಾಲುಕ್ಕಾಸ್ ವತಿಯಿಂದ ಕ್ಯಾಶ್‌ಬ್ಯಾಕ್ ಸಂಭ್ರಮಾಚರಣೆ ಕೊಡುಗೆ ನೀಡಲಾಗುತ್ತಿದೆ.

ಗ್ರಾಹಕರ ಪ್ರತಿಯೊಂದು ಖರೀದಿಗೆ ಕ್ಯಾಶ್‌ಬ್ಯಾಕ್ ಕೊಡುಗೆ ಇದೆ. ಬಂಗಾರ, ವಜ್ರ, ಬೆಳ್ಳಿ ಹಾಗೂ ಇತರೆ ಖರೀದಿಗೆ ಕ್ಯಾಶ್‌ಬ್ಯಾಕ್ ನೀಡಲಾಗುವುದು. ಗ್ರಾಹಕರು ಜನಸಂದಣಿ ತಪ್ಪಿಸಲು ಮುಂಗಡವಾಗಿ ಬುಕ್ಕಿಂಗ್ ಮಾಡಬಹುದು ಎಂದು ಕಂಪನಿ ತಿಳಿಸಿದೆ.

ಪ್ರತಿ ಹತ್ತು ಸಾವಿರ ರೂ. ಹಾಗೂ ಅಧಿಕ ಮೊತ್ತದ ಬೆಳ್ಳಿ ಆಭರಣ ಖರೀದಿ ಮೇಲೆ 500 ರೂ. ಗಿಫ್ಟ್ ವೋಚರ್ ನೀಡಲಾಗುವುದು. 50 ಸಾವಿರ ರೂ.ಗಳಿಗೂ ಅಧಿಕ ಮೊತ್ತದ ಚಿನ್ನಾಭರಣ ಖರೀದಿಗೆ 1,000 ರೂ. ಗಿಫ್ಟ್ ವೋಚರ್ ನೀಡಲಾಗುವುದು. 50 ಸಾವಿರ ರೂ.ಗಳಿಗೂ ಅಧಿಕ ಮೊತ್ತದ ವಜ್ರ, ಅನ್‌ಕಟ್ ವಜ್ರ, ಅನರ್ಘ್ಯ ರತ್ನಾಭರಣ ಖರೀದಿ ಮೇಲೆ 2,000 ರೂ.ಗಳ ಗಿಫ್ಟ್ ವೋಚರ್ ನೀಡಲಾಗುವುದು. ಇದರ ಜೊತೆಗೆ ಎಸ್.ಬಿ.ಐ. ಕ್ರೆಡಿಟ್ ಕಾರ್ಡ್‌ಗಳಿಗೆ ಶೇ.5ರ ಹೆಚ್ಚುವರಿ ವಿನಾಯಿತಿ ಸಹ ದೊರೆಯಲಿದೆ. ಈ ಕೊಡುಗೆ ಏಪ್ರಿಲ್ 14ರಿಂದ 23ರವರೆಗೆ ಲಭ್ಯವಿರಲಿದೆ.

ಗ್ರಾಹಕರ ಅಗತ್ಯಗಳಿಗೆ ಅನುಗುಣವಾಗಿ ನಾವು ವೈವಿಧ್ಯಮಯ ಹಾಗೂ ಅತ್ಯುತ್ತಮ ಆಯ್ಕೆಗಳನ್ನು ನೀಡುತ್ತಿದ್ದೇವೆ. ಇದರ ಜೊತೆ ಧನ್ಯವಾದದ ಸಂಕೇತವಾಗಿ ಕ್ಯಾಶ್‌ಬ್ಯಾಕ್ ಸಹ ನೀಡುತ್ತಿದ್ದೇವೆ ಎಂದು ಜೋಯಾಲುಕ್ಕಾಸ್ ಸಮೂಹದ ಅಧ್ಯಕ್ಷ ಹಾಗೂ ವ್ಯವಸ್ಥಾಪಕ ನಿರ್ದೇಶಕ ಜೋಯಾಲುಕ್ಕಾಸ್ ತಿಳಿಸಿದ್ದಾರೆ.

### ಸತ್ತೂರು ಕೆಂಚವೀರಮ್ಮ ನಿಧನ



ವಿಜಯನಗರ ಜಿಲ್ಲೆ ಹರಪನಹಳ್ಳಿ ತಾಲ್ಲೂಕು ಸತ್ತೂರು ಗ್ರಾಮದ ವಾಸಿ ಮರಕುಂಟೆ ನಾಗಪ್ಪ ಇವರ ಪತ್ನಿ ಕೆಂಚವೀರಮ್ಮ (75) ದಿನಾಂಕ 13.4.2023ರ ಗುರುವಾರ ಮಧ್ಯಾಹ್ನ 03.45ಕ್ಕೆ ನಿಧನರಾದರು. ಓರ್ವ ಪುತ್ರ, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದು, ಮೃತರ ಅಂತ್ಯಕ್ರಿಯೆ ಯನ್ನು ದಿನಾಂಕ 14.4.2023ರ ಶುಕ್ರವಾರ ಮಧ್ಯಾಹ್ನ 1ಕ್ಕೆ ಮೃತರ ಸ್ವಗ್ರಾಮವಾದ ಹರಪನಹಳ್ಳಿ ತಾಲ್ಲೂಕು ಸತ್ತೂರು ಗ್ರಾಮದಲ್ಲಿ ನೆರವೇರಿಸಲಾಗುವುದು.

### ಅಣಬೇರು ನಾಗೇಶಪ್ಪ ನಿಧನ



ದಾವಣಗೆರೆ ತಾಲ್ಲೂಕು ಅಣಬೇರು ಗ್ರಾಮದ ವಾಸಿ ನಿವೃತ್ತ ಶಿಕ್ಷಕರಾದ ಕೆ. ನಾಗೇಶಪ್ಪ (91) ಇವರು ದಿನಾಂಕ : 13.4.2023 ರಂದು ಬೆಳಿಗ್ಗೆ 11 ಗಂಟೆಗೆ ನಿಧನರಾಗಿದ್ದಾರೆ. ಪತ್ನಿ, ನಾಲ್ವರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗದವರನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ : 14.4.2023ರ ಶುಕ್ರವಾರ ಬೆಳಿಗ್ಗೆ 10ಕ್ಕೆ ಮೃತರ ಸ್ವಗ್ರಾಮವಾದ ದಾವಣಗೆರೆ ತಾಲ್ಲೂಕು ಅಣಬೇರು ಗ್ರಾಮದ ಮೃತರ ತೋಟದಲ್ಲಿ ನೆರವೇರಲಿದೆ.

### ಎಲೆಬೇತೂರು ಮರಿಕುಂಟೆ ಮಂಜುನಾಥ್ ನಿಧನ



ದಾವಣಗೆರೆ ಸಮೀಪದ ಎಲೆಬೇತೂರು ವಾಸಿ ದಿ|| ಮರಿಕುಂಟೆ ಹರಿಯಪ್ಪನವರ ಮಗ ಮರಿಕುಂಟೆ ಮಂಜುನಾಥ್ ಅವರು ದಿನಾಂಕ 13-4-2023ರ ಗುರುವಾರ ರಾತ್ರಿ 10.30ಕ್ಕೆ ನಿಧನ ರಾದರು. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗ ವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 14-4-2023ರ ಶುಕ್ರವಾರ ಮಧ್ಯಾಹ್ನ 12.30 ಕ್ಕೆ ಎಲೆಬೇತೂರಿನಲ್ಲಿ ನೆರವೇರಿಸಲಾಗುವುದು.



## ಹರಿಹರ : ಮತದಾನದ ಜಾಗೃತಿಗೆ ಬೈಕ್ ರ‍್ಯಾಲಿ

ಹರಿಹರ, ಏ. 13 – ಮತದಾನದ ಬಗ್ಗೆ ಜಾಗೃತಿ ಮೂಡಿಸಲು ತಾಲ್ಲೂಕು ಪಂಚಾಯ್ತಿ ಆವರಣದಿಂದ ಬೈಕ್ ರ‍್ಯಾಲಿ ಆಯೋಜಿಸಲಾಗಿತ್ತು. ಚುನಾವಣೆ ಅಧಿಕಾರಿ ಉದಯ್ ಕುಮಾರ್ ಕುಂಬಾರ, ತಹಶೀಲ್ದಾರ್ ಪೃಥ್ವಿ ಸಾನಿಕಂ, ತಾ.ಪಂ. ಇಓ ರವಿ, ಬಿಇಓ ಹನುಮಂತಪ್ಪ ನಗರಸಭೆ ಪೌರಾಯುಕ್ತ ಐಗೂರು ಬಸವರಾಜ್ ರ‍್ಯಾಲಿಗೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ತಾ.ಪಂ. ಇಲಾಖೆ ಪೂಜಾ, ಲಿಂಗರಾಜ್, ನಗರಸಭೆ ಅಣ್ಣಪ್ಪ, ಪ್ರಕಾಶ್, ಮಂಜುನಾಥ್, ಶಿಕ್ಷಣ ಇಲಾಖೆ ಬಸವರಾಜಯ್ಯ, ಸಿಡಿಪಿಓ ಪೂರ್ಣಿಮಾ ಮತ್ತಿತರರು ಉಪಸ್ಥಿತರಿದ್ದರು.

# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ, ಚಿಕ್ಕಮಗಳೂರು, ತುಮಕೂರು, ಗದಗ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಶುಕ್ರವಾರ, ಏಪ್ರಿಲ್ 14, 2023


# 221 ಹುರಿಯಾಳುಗಳಿಂದ ನಾಮಪತ್ರ

## ಬೊಮ್ಮಾಯಿ ಸೇರಿದಂತೆ ಸಚಿವರಾದ ಮುರುಗೇಶ್ ನಿರಾಣಿ, ಎಸ್.ಟಿ.ಸೋಮಶೇಖರ್, ಡಾ.ಸುಧಾಕರ್, ಸಿ.ಸಿ.ಪಾಟೀಲ್ ಸೇರಿದಂತೆ ಸಚಿವರು ಮತ್ತು ವಿವಿಧ ಪಕ್ಷಗಳ ಮುಖಂಡರಿಂದ ನಾಮಪತ್ರ ಸಲ್ಲಿಕೆ

ಬೆಂಗಳೂರು, ಏ. 13 - ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಸಂಪುಟದ ಹಲವು ಸಚಿವರು ಸೇರಿದಂತೆ, 221 ಮಂದಿ ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ನಾಮಪತ್ರ ಸಲ್ಲಿಸಿದ್ದಾರೆ.

ಪ್ರಸಕ್ತ ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ಇಂದು ಅಧಿಸೂಚನೆ ಹೊರ ಬೀಳುತ್ತಿದ್ದಂತೆಯೇ ನಾಮಪತ್ರ ಸಲ್ಲಿಕೆ ಕಾರ್ಯ ಆರಂಭವಾಯಿತಲ್ಲದೆ, ವಿವಿಧ ರಾಜಕೀಯ ಪಕ್ಷಗಳ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದರು.

ಸಚಿವರಾದ ಮುರುಗೇಶ್ ನಿರಾಣಿ, ಎಸ್.ಟಿ.ಸೋಮಶೇಖರ್, ಡಾ. ಸುಧಾಕರ್, ಸಿ.ಸಿ.ಪಾಟೀಲ್ ಸೇರಿದಂತೆ ಸಚಿವರು ಮತ್ತು ವಿವಿಧ ಪಕ್ಷಗಳ ಮುಖಂಡರು ತಮ್ಮ ಸ್ವಕ್ಷೇತ್ರಗಳಲ್ಲಿ ಚುನಾವಣಾ ಅಧಿಕಾರಿಗಳಿಗೆ ನಾಮಪತ್ರ ಸಲ್ಲಿಸಿದರು.

ಈಗಾಗಲೇ ಆಡಳಿತಾರೂಢ ಬಿಜೆಪಿ ಎರಡು ಕಂತಿನಲ್ಲಿ 212 ಮಂದಿ ಅಭ್ಯರ್ಥಿಗಳ ಪಟ್ಟಿಯನ್ನು ಬಿಡುಗಡೆ ಮಾಡಿದ್ದು, ಪ್ರತಿಪಕ್ಷ ಕಾಂಗ್ರೆಸ್ ಕೂಡಾ ಎರಡು ಕಂತುಗಳಲ್ಲಿ 166 ಮಂದಿ ಅಭ್ಯರ್ಥಿಗಳ ಪಟ್ಟಿಯನ್ನು ಬಿಡುಗಡೆ ಮಾಡಿದೆ.

ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ ನೇತೃತ್ವದ ಜಾತ್ಯತೀತ ಜನತಾದಳ ಮೊದಲ ಹಂತದಲ್ಲಿ 93 ಅಭ್ಯರ್ಥಿಗಳ ಪಟ್ಟಿಯನ್ನು ಬಿಡುಗಡೆ ಮಾಡಿದ್ದು, ಶುಕ್ರವಾರ ಎರಡನೇ ಪಟ್ಟಿಯನ್ನು ಬಿಡುಗಡೆ ಮಾಡಲಿದೆ.

ನಾಮಪತ್ರ ಸಲ್ಲಿಸಲು ಆರಂಭದ ದಿನವಾದ ಇಂದು ವಿವಿಧ ಪಕ್ಷಗಳ ಹಾಲಿ ಶಾಸಕರು, ಮಾಜಿ ಶಾಸಕರು ಮತ್ತು ಪಕ್ಷೇತರರು ಸೇರಿದಂತೆ, ಐನೂರಕ್ಕೂ ಹೆಚ್ಚು ಮಂದಿ ತಮ್ಮ ಉಮೇದುವಾರಿಕೆಯನ್ನು ಸಲ್ಲಿಸಿದರು.

ಈ ಬಾರಿ 224 ವಿಧಾನಸಭಾ ಕ್ಷೇತ್ರಗಳಲ್ಲೂ ಪ್ರಬಲ (5ನೇ ಪುಟಕ್ಕೆ)

## ಎಸ್ಸೆಸ್ಸೆಂ ಸೇರಿ ನಾಲ್ಕು ನಾಮಪತ್ರ ಸಲ್ಲಿಕೆ



ದಾವಣಗೆರೆ, ಏ. 13- ಮೇ 10ರಂದು ನಡೆಯಲಿರುವ ವಿಧಾನಸಭಾ ಚುನಾವಣೆಗೆ ನಾಮಪತ್ರ ಸಲ್ಲಿಸುವ ಆರಂಭಿಕ ದಿನದಲ್ಲಿ ಜಿಲ್ಲೆಯಲ್ಲಿ ನಾಲ್ಕು ನಾಮಪತ್ರಗಳು ಸಲ್ಲಿಕೆಯಾಗಿವೆ.

ದಾವಣಗೆರೆ ಉತ್ತರ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿ ಎಸ್.ಎಸ್. ಮಲ್ಲಿಕಾರ್ಜುನ್ 2 ನಾಮಪತ್ರ ಸಲ್ಲಿಸಿದ್ದಾರೆ. ದಾವಣಗೆರೆ ದಕ್ಷಿಣ ಕ್ಷೇತ್ರದಿಂದ ಪಕ್ಷೇತರರಾಗಿ ಸುಭಾನ್ ಖಾನ್ ಹಾಗೂ ಸೋಷಿಯಲಿಸ್ಟ್ ಯುನಿಟಿ ಸೆಂಟರ್ ಆಫ್ ಇಂಡಿಯಾ (ಕಮ್ಯೂನಿಸ್ಟ್) ಪಕ್ಷದಿಂದ ಭಾರತಿ ಕೆ ಅವರು ನಾಮಪತ್ರ ಸಲ್ಲಿಸಿದ್ದಾರೆ.

**ಪತ್ನಿ ಜೊತೆ ಆಗಮಿಸಿ ನಾಮಪತ್ರ ಸಲ್ಲಿಸಿದ ಎಸ್ಸೆಸ್ಸೆಂ :** ದಾವಣಗೆರೆ ಉತ್ತರ ಕ್ಷೇತ್ರದ ಅಭ್ಯರ್ಥಿ ಎಸ್.ಎಸ್. ಮಲ್ಲಿಕಾರ್ಜುನ್ ಮೊದಲ ದಿನವೇ ಸಾಂಕೇತಿಕವಾಗಿ ನಾಮಪತ್ರ ಸಲ್ಲಿಸಿ ಅಚ್ಚರಿ ಮೂಡಿಸಿದರು.

ಯಾವುದೇ ಪ್ರಚಾರ, ಅಬ್ಬರ, ಕಾರ್ಯಕರ್ತರ ಘೋಷಣೆಗಳು ಇಲ್ಲದೆ ತಮ್ಮ ಪತ್ನಿ ಪ್ರಭಾ ಮಲ್ಲಿಕಾರ್ಜುನ್, ಡಾ. ಹೆಚ್.ಬಿ. ಅರವಿಂದ್, ವಕೀಲ ಸೈಯದ್ ಸಲೀಂ, ಜಿ.ಹೆಚ್. ಗಣೇಶ್ ಅವರೊಂದಿಗೆ ಆಗಮಿಸಿ ನಾಮಪತ್ರ ಸಲ್ಲಿಸಿದರು. ಇಂದು ನಾಮಪತ್ರ ಸಲ್ಲಿಸಿದರೆ ಒಳಿತಾಗುತ್ತದೆ ಎಂದು ದೇವರ ಅಪ್ಪಣೆಯಾಗಿದ್ದರಿಂದ ಇಂದು ಸಲ್ಲಿಸಿ ದ್ದೇನೆ. ಬರುವ ಏ.17ರಂದು ಕಾರ್ಯಕರ್ತರೊಂದಿಗೆ ಮೆರವಣಿಗೆ (5ನೇ ಪುಟಕ್ಕೆ)

# ಎರಡನೇ ಪಟ್ಟಿ ನಂತರ ಬಿಜೆಪಿ ಭಿನ್ನಮತ ಇನ್ನಷ್ಟು ಭುಗಿಲು

ಬೆಂಗಳೂರು, ಏ. 13 - ವಿಧಾನಸಭಾ ಚುನಾವಣೆಗೆ ಬಿಜೆಪಿ ಅಭ್ಯರ್ಥಿಗಳ ಮೊದಲ ಪಟ್ಟಿ ಪ್ರಕಟವಾದ ಬೆನ್ನಲ್ಲೇ ಸ್ಫೋಟಗೊಂಡಿದ್ದ ಭಿನ್ನಮತ, ಎರಡನೇ ಪಟ್ಟಿ ನಂತರ ಇನ್ನಷ್ಟು ತಾರಕಕ್ಕೇರಿದೆ.

7 ಹಾಲಿ ಶಾಸಕರಿಗೆ ಟಿಕೆಟ್ ನೀಡದಿರುವುದೂ ಅಸಮಾಧಾನದ ಬೆಂಕಿಗೆ ತುಪ್ಪ ಸುರಿದಿದೆ. ಟಿಕೆಟ್ ವಂಚಿತ ಶಾಸಕರಾದ ಎಂ.ಪಿ ಕುಮಾರಸ್ವಾಮಿ, ನೆಹರು ಓಲೇಕಾರ್ ಅವರು ತಮ್ಮ ಪಕ್ಷದ ನಾಯಕರ ವಿರುದ್ಧ ಆಕ್ರೋಶ ಹೊರ ಹಾಕಿದ್ದಾರೆ.

ಮೂಡಿಗೆರೆಯ ವಿಧಾನಸಭಾ ಸದಸ್ಯ ಸ್ಥಾನಕ್ಕೆ ಎಂ. ಪಿ.ಕುಮಾರಸ್ವಾಮಿ ರಾಜೀನಾಮೆ ನೀಡಿ, ಬಂಡಾಯದ ಬಾವುಟ ಹಾರಿಸಲು ಮುಂದಾಗಿದ್ದಾರೆ. ಈ ನಡುವೆ ಜೆಡಿಎಸ್ ಸೇರುವ ಸಾಧ್ಯತೆಗಳಿವೆ ಎಂದು ಹೇಳಲಾಗುತ್ತಿದೆ.

ಹಾವೇರಿ ಕ್ಷೇತ್ರದ ನೆಹರು ಓಲೇಕಾರ್ ಕೂಡ ಬಂಡಾಯವಾಗಿ ಸ್ಪರ್ಧಿಸುವ ಸಾಧ್ಯತೆ ಇದೆ. ಹಾಗೆಯೇ ಟಿಕೆಟ್ ನಿರಾಕರಿಸಲ್ಪಟ್ಟಿರುವ ಕಲಘಟಗಿಯ ನಿಂಬಣ್ಣನವರ್, ಮಾಯಕೊಂಡದ ಲಿಂಗಣ್ಣ, ಬೈಂದೂರಿನ ಸುಕುಮಾರ ಶೆಟ್ಟಿ ಸಹ ಪಕ್ಷದ ನಿರ್ಧಾರಕ್ಕೆ ಅಸಮಾಧಾನ ಹೊರ ಹಾಕಿದ್ದಾರೆ.

ಅಪೇಕ್ಷಿತ ಕ್ಷೇತ್ರಗಳಲ್ಲಿ ಬಿಜೆಪಿ ಟಿಕೆಟ್ ವಂಚಿತರು, ಇತರೆ ಪಕ್ಷಗಳತ್ತ ವಾಲುವ ಸಾಧ್ಯತೆ ಹೆಚ್ಚಾಗಿದೆ. ಬಿಜೆಪಿ ಪ್ರಕಟಿಸಿದ 189 ಅಭ್ಯರ್ಥಿಗಳ ಮೊದಲ ಪಟ್ಟಿಯಲ್ಲಿ 8 ಹಾಲಿ ಶಾಸಕರಿಗೆ ದೊರೆತಿರಲಿಲ್ಲ. ಇದರಿಂದ ಬಂಡಾಯದ ಬಿಸಿ ತಣ್ಣಗಾಗುವ ಬದಲು ಉರಿಯುವ ಬೆಂಕಿಗೆ ತುಪ್ಪ ಸುರಿದಂತೆ ಪ್ರಜ್ವಲಿಸತೊಡಗಿದೆ.

ಕಳೆದ ಎರಡು ದಿನಗಳಿಂದ ಬಂಡಾಯವನ್ನು ಶಮನಗೊಳಿಸಲು ಬಿಜೆಪಿ ನಾಯಕರು ಹರಸಾಹಸ ಪಡುತ್ತಿದ್ದಾರೆ. ಅತೃಪ್ತರ ಮನವೊಲಿಸುವ ನಿರಂತರ ಪ್ರಯತ್ನದ ನಡುವೆಯೂ ಅಸಮಾಧಾನಗೊಳ್ಳುವವರು ಹೆಚ್ಚುತ್ತಲೇ ಇದ್ದಾರೆ.

ಟಿಕೆಟ್ ವಂಚಿತರಲ್ಲಿ ಕೆಲವರು ಪಕ್ಷದ ಅಧಿಕೃತ ಅಭ್ಯರ್ಥಿಗಳ ವಿರುದ್ಧವೇ ವಿಧಾನಸಭೆ ಚುನಾವಣೆಯಲ್ಲಿ ಬಂಡಾಯ ಸ್ಪರ್ಧೆಗೆ ಅಣಿಯಾಗಿರುವುದು ಬಿಜೆಪಿ ವರಿಷ್ಠರಿಗೆ ಹೊಸ ತಲೆನೋವಾಗಿ ಪರಿಣಮಿಸಿದೆ.

## ಹೆಚ್.ಬಸಾಪುರ ಚೆಕ್ ಪೋಸ್ಟ್ ಬಳಿ 4.10 ಲಕ್ಷ ರೂ. ಹಣ ಜಪ್ತಿ

ದಾವಣಗೆರೆ, ಏ.13- ದಾಖಲೆ ಇಲ್ಲದೆ ಸಾಗಿಸುತ್ತಿದ್ದ 4.10 ಲಕ್ಷ ರೂ. ಹಣವನ್ನು ಮಾಯಕೊಂಡ ಕ್ಷೇತ್ರ ವ್ಯಾಪ್ತಿಯ ಹೆಚ್. ಬಸಾಪುರ ಚೆಕ್ ಪೋಸ್ಟ್ ಬಳಿ ವಶ ಪಡಿಸಿಕೊಳ್ಳಲಾಗಿದೆ.

ದಾವಣಗೆರೆಯಿಂದ ಹೊಳಲ್ಕೆರೆಗೆ ಬೈಕ್‌ನಲ್ಲಿ ತೆಗೆದುಕೊಂಡು ಹೋಗುತ್ತಿದ್ದಾಗ ಪರಿಶೀಲಿಸಿದ ಅಧಿಕಾರಿಗಳು, ಹಣಕ್ಕೆ ಸೂಕ್ತ ದಾಖಲೆ ಇಲ್ಲದ ಕಾರಣಕ್ಕಾಗಿ ವಶಪಡಿಸಿಕೊಂಡಿದ್ದಾರೆ.

# ಕ್ರಿಶ್ಚಿಯನ್ ಸಂಸ್ಥೆಗಳ ಮೇಲಿನ ದಾಳಿ ವರದಿ ತಳ್ಳಿ ಹಾಕಿದ ಕೇಂದ್ರ

**ವೈಯಕ್ತಿಕ ಪ್ರಕರಣಗಳು, ಸಣ್ಣ ಘಟನೆಗಳ ವೈಭವೀಕರಣ**

ನವದೆಹಲಿ, ಏ. 13 – ಕ್ರಿಶ್ಚಿಯನ್ ಸಂಸ್ಥೆಗಳು ಹಾಗೂ ಪಾದ್ರಿಗಳ ಮೇಲೆ 495 ದಾಳಿ ಪ್ರಕರಣಗಳು ನಡೆದಿವೆ ಎಂಬ ವರದಿಗಳನ್ನು ತಳ್ಳಿ ಹಾಕಿರುವ ಕೇಂದ್ರ ಸರ್ಕಾರ, ಕೌಟುಂಬಿಕ ಕಲಹ ಹಾಗೂ ಖಾಸಗಿ ಜಮೀನು ವ್ಯಾಜ್ಯಗಳನ್ನೂ ಕೋಮು ಘಟನೆಗಳು ಎಂದು ಬಿಂಬಿಸಲಾಗುತ್ತಿದೆ ಎಂದು ಹೇಳಿದೆ.

ಸುಪ್ರೀಂ ಕೋರ್ಟ್ ಎದುರು ಪ್ರಮಾಣ ಪತ್ರ ದಾಖಲಿಸಿರುವ ಕೇಂದ್ರ ಗೃಹ ಸಚಿವಾಲಯ, ವಿದೇಶಗಳಲ್ಲಿ ಭಾರತದ ವರ್ಚಸ್ಸಿಗೆ ಮಸಿ ಬಳಿಯಲು ಘಟನೆಗಳನ್ನು ವೈಭವೀಕರಿಸಲಾಗುತ್ತಿದೆ ಎಂದು ಹೇಳಿದೆ.

ನ್ಯಾಷನಲ್ ಸಾಲಿಡಾರಿಟಿ ಫೋರಂನ ರೆವರೆಂಡ್ ಪೀಟರ್ ಮಚಾಡೋ ಹಾಗೂ ಎವಾಂಜಲಿಕಲ್ ಫೆಲೋಶಿಪ್ ಆಫ್ ಇಂಡಿಯಾದ ರೆವರೆಂಡ್ ವಿಜಯೇಶ್ ಲಾಲ್ ಅವರು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿ ಕ್ರಿಶ್ಚಿಯನ್ ಸಮುದಾಯದ ಸದಸ್ಯರ ಮೇಲೆ ಹಿಂಸಾಚಾರ ನಡೆಸಲಾಗುತ್ತಿದೆ. ಈ ರೀತಿಯ 495 ಘಟನೆಗಳು ನಡೆದಿವೆ ಎಂದು ಹೇಳಿದ್ದರು.

ಕೇಂದ್ರ ಸರ್ಕಾರದ ಪರವಾಗಿ ಹಾಜರಿದ್ದ ಸಾಲಿಸಿಟರ್ ಜನರಲ್ ತುಶಾರ್ ಮೆಹ್ತ, ಎಂಟು ರಾಜ್ಯಗಳಿಂದ ಘಟನೆಗಳ ಬಗ್ಗೆ ಮಾಹಿತಿ ಪಡೆಯಲಾಗಿದೆ. ಆದರೆ, ಅರ್ಜಿದಾರರು ಉಲ್ಲೇಖಿಸಿದ 495 ಘಟನೆಗಳ ಪೈಕಿ 263 ಘಟನೆಗಳನ್ನು ರಾಜ್ಯ ಸರ್ಕಾರಗಳ ಬಳಿ ದಾಖಲಿಸಿಯೇ ಇಲ್ಲ ಎಂದಿದ್ದಾರೆ. ಉಳಿದ 232 ಪ್ರಕರಣಗಳ ಪೈಕಿ 73 ಪ್ರಕರಣಗಳನ್ನು ಸಂಬಂಧಿಸಿದವರು ಪರಸ್ಪರ ಸೌಹಾರ್ದಯುತವಾಗಿ ಬಗೆ ಹರಿಸಿಕೊಂಡಿದ್ದಾರೆ. (5ನೇ ಪುಟಕ್ಕೆ)

# ಮುಸ್ಲಿಂ ಮೀಸಲಾತಿ ರದ್ಧತಿ ದೋಷಪೂರಿತ : ಸುಪ್ರೀಂ

ನವದೆಹಲಿ, ಏ. 13 – ಕರ್ನಾಟಕದಲ್ಲಿ ಒಕ್ಕಲಿಗರು ಹಾಗೂ ಲಿಂಗಾಯತರಿಗೆ ಮೀಸಲಾತಿ ಹೆಚ್ಚಿಸಿರುವುದು ಹಾಗೂ ಇತರೆ ಹಿಂದುಳಿದ ವರ್ಗಗಳ ಮುಸ್ಲಿಮರ ಮೀಸಲಾತಿ ರದ್ದುಗೊಳಿಸಿರುವುದಕ್ಕೆ ದುರ್ಬಲ ಆಧಾರವಿದೆ ಹಾಗೂ ದೋಷಪೂರಿತವಾಗಿದೆ ಎಂದು ಸುಪ್ರೀಂ ಕೋರ್ಟ್ ಟಿಪ್ಪಣಿ ಮಾಡಿದೆ.

ನ್ಯಾಯಮೂರ್ತಿಗಳಾದ ಕೆ.ಎಂ. ಜೋಸೆಫ್ ಹಾಗೂ ಬಿ.ವಿ. ನಾಗರತ್ನ ಅವರನ್ನು ಒಳಗೊಂಡ ಪೀಠ ಕರ್ನಾಟಕ ಸರ್ಕಾರ ಮಂಡಿಸಿರುವ ದಾಖಲೆಗಳನ್ನು ಪರಿಶೀಲಿಸಿದ್ದು, ಮೀಸಲಾತಿ ಬದಲಾವಣೆ ತಪ್ಪು ಕಲ್ಪನೆಯಿಂದ ಕೂಡಿದೆ ಎಂದು ತಿಳಿಸಿದೆ.



ಮುಸ್ಲಿಂ ಸಮುದಾಯದವರ ಪರವಾಗಿ ವಾದ ಮಂಡಿಸಿದ ಹಿರಿಯ ವಕೀಲರಾದ ಕಪಿಲ್ ಸಿಬಾಲ್, ದುಶ್ಯಂತ್ ದಾವೆ ಹಾಗೂ ಗೋಪಾಲ ಶಂಕರನಾರಾಯಣನ್, ಮುಸ್ಲಿಮರ ಮೀಸಲಾತಿ ರದ್ದುಗೊಳಿಸುವುದಕ್ಕೆ ಸರ್ಕಾರದ ಬಳಿ ಯಾವುದೇ ಸ್ಪಷ್ಟ ದಾಖಲೆಗಳಿಲ್ಲ ಎಂದು ತಿಳಿಸಿದರು.

ರಾಜ್ಯ ಸರ್ಕಾರದ ಪರವಾಗಿ ಹಾಜರಿದ್ದ ಸಾಲಿಸಿಟರ್ ಜನರಲ್ ತುಶಾರ್ ಮೆಹ್ತ, ಅರ್ಜಿಗಳಿಗೆ ಉತ್ತರಿಸಲು ಸ್ವಲ್ಪ ಸಮಯ ನೀಡಬೇಕು. ಮಾರ್ಚ್ 24ರಂದು ಸರ್ಕಾರ ಹೊರಡಿಸಿರುವ ಆದೇಶ ದ ಮೇಲೆ ಯಾವುದೇ ನೇಮಕಾತಿ ಕ್ರಮಗಳನ್ನು ತೆಗೆದುಕೊಳ್ಳುವುದಿಲ್ಲ ಎಂದು ಹೇಳಿದರು.

ಒಕ್ಕಲಿಗ ಹಾಗೂ ಲಿಂಗಾಯತ ಸಮುದಾಯಗಳ ಸದಸ್ಯರ ಪರವಾಗಿ ಹಾಜರಿದ್ದ ಹಿರಿಯ ವಕೀಲ ಮುಕುಲ್ ರೊಹತಗಿ, ಈ ವಿಷಯ ಕುರಿತು ತಮ್ಮ ಉತ್ತರ ಸಲ್ಲಿಸದೇ ಯಾವುದೇ ಮಧ್ಯಂತರ ಆದೇಶ ಹೊರಡಿಸಬಾರದು ಎಂದು ಮನವಿ ಮಾಡಿಕೊಂಡರು. ನ್ಯಾಯಾಲಯ ಪ್ರಕರಣದ ಮುಂದಿನ ವಿಚಾರಣೆಯನ್ನು ಏಪ್ರಿಲ್ 18ಕ್ಕೆ ನಿಗದಿ ಪಡಿಸಿದ್ದು, ಮೆಹ್ತ ಹಾಗೂ ರೊಹತಗಿ ತಮ್ಮ ಪ್ರತಿಕ್ರಿಯಿ ದಾಖಲಿಸುವಂತೆ ತಿಳಿಸಿದೆ.

# ಎಸ್ಸೆಸ್ಸೆಂ ಆಸ್ತಿ 152.7 ಕೋಟಿ ರೂ.



ದಾವಣಗೆರೆ, ಏ. 13 – ದಾವಣಗೆರೆ ಉತ್ತರ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿರುವ ಎಸ್.ಎಸ್. ಮಲ್ಲಿಕಾರ್ಜುನ್ ಅವರು 81.93 ಕೋಟಿ ರೂ.ಗಳ ಚರಾಸ್ತಿ ಹಾಗೂ 70.77 ಕೋಟಿ ರೂ.ಗಳ ಸ್ಥಿರಾಸ್ತಿಗೆ ಮಾಲೀಕರಾಗಿದ್ದಾರೆ.

ಅವರು ಹೊಂದಿರುವ ಆಸ್ತಿಯ ಒಟ್ಟು ಮೌಲ್ಯ 152.7 ಕೋಟಿ ರೂ. ಎಂದು ನಾಮಪತ್ರದ ವೇಳೆ ಸಲ್ಲಿಸಿರುವ ಆಸ್ತಿಗಳ ವಿವರದಲ್ಲಿ ತಿಳಿಸಲಾಗಿದೆ.

ಅವರ ಪತ್ನಿ ಪ್ರಭಾ ಮಲ್ಲಿಕಾರ್ಜುನ್ ಅವರು 5.88 ಕೋಟಿ ರೂ.ಗಳ ಚರಾಸ್ತಿ ಹಾಗೂ 30.61 ಕೋಟಿ ರೂ.ಗಳ ಸ್ಥಿರಾಸ್ತಿ ಹೊಂದಿದ್ದಾರೆ. ಅವರು ಹೊಂದಿರುವ ಆಸ್ತಿಗಳ ಒಟ್ಟು ಮೌಲ್ಯ 36.49 ಕೋಟಿ ರೂ. ಆಗಿದೆ.

ಅಲ್ಲದೇ, ಮಲ್ಲಿಕಾರ್ಜುನ್ ಅವರು 23.60 ಕೋಟಿ ರೂ. ಸಾಲ ಹೊಂದಿದ್ದಾರೆ. ಪ್ರಭಾ ಮಲ್ಲಿಕಾರ್ಜುನ್ ಹೊಂದಿರುವ ಸಾಲ 97.28 ಲಕ್ಷ ರೂ. ಎಂದು ತಿಳಿಸಲಾಗಿದೆ.

2022-23ರ ಹಣಕಾಸು ವರ್ಷದಲ್ಲಿ 2.07 ಕೋಟಿ ರೂ.ಗಳ ಆದಾಯದ ಬಗ್ಗೆ ಐದಾಯ ತೆರಿಗೆ ಇಲಾಖೆಗೆ ರಿಟರ್ನ್ ದಾಖಲಿಸಿರುವುದಾಗಿ ಮಲ್ಲಿಕಾರ್ಜುನ್ ತಿಳಿಸಿದ್ದಾರೆ.

ಕೈಯ್ಯಲ್ಲಿರುವ ನಗದು 3.66 ಲಕ್ಷ ರೂ. ಹಾಗೂ ಬ್ಯಾಂಕುಗಳಲ್ಲಿರುವ ಠೇವಣಿ 1.56 ಕೋಟಿ ರೂ., ಷೇರು ಇತ್ಯಾದಿಗಳ ಮೇಲಿನ ಹೂಡಿಕೆ 54.40 ಕೋಟಿ ರೂ., ಉಳಿತಾಯಗಳ ಮೇಲಿನ ಹೂಡಿಕೆ 4.15 ಕೋಟಿ ರೂ., ಬೇರೆಯವರಿಗೆ ನೀಡಿರುವ ಸಾಲ 6.41 ಕೋಟಿ ರೂ., ಆಭರಣಗಳ ಮೌಲ್ಯ 15.35 ಕೋಟಿ ರೂ. ಎಂದು ತಿಳಿಸಲಾಗಿದೆ. ಪ್ರಭಾ ಮಲ್ಲಿಕಾರ್ಜುನ್ (5ನೇ ಪುಟಕ್ಕೆ)

## ಉತ್ತರ ಪ್ರದೇಶದ ಪೊಲೀಸ್ ಎನ್‌ಕೌಂಟರ್‌ನಲ್ಲಿ ಅಸಾದ್ ಸಾವು

ಲಖ್ನೌ, ಏ. 13 – ಮಾಜಿ ಭೂಗತ ಆಗಿದ್ದ ರಾಜಕಾರಣಿ ಆತೀಕ್ ಅಹಮದ್ ಮಗ ಅಸಾದ್ ಹಾಗೂ ಸಹಚರನೋರ್ವ ಉತ್ತರ ಪ್ರದೇಶದ ಪೊಲೀಸರು ಝೂನ್ಸಿಯಲ್ಲಿ ನಡೆಸಿದ ಕಾರ್ಯಾಚರಣೆಯಲ್ಲಿ ಹತರಾಗಿದ್ದಾರೆ. ಇವರಿಬ್ಬರು ಉಮೇಶ್ ಪಾಲ್ ಹತ್ಯೆ ಪ್ರಕರಣದ ಆರೋಪಿಗಳಾಗಿದ್ದರು.

ಹತರಾದ ಇಬ್ಬರ ತಲೆಗೆ ತಲಾ ಐದು ಲಕ್ಷ ರೂ.ಗಳ ಬಹುಮಾನವಿತ್ತು. ಇವರು ಉತ್ತರ ಪ್ರದೇಶ ಪೊಲೀಸರ ವಿಶೇಷ ಕಾರ್ಯಪಡೆ ನಡೆಸಿದ ಕಾರ್ಯಾಚರಣೆಯಲ್ಲಿ ಹತರಾಗಿದ್ದಾರೆ ಎಂದು ಎಸ್‌ಡಿಜಿ (ಕಾನೂನು ಮತ್ತು ಸುವ್ಯವಸ್ಥೆ) ಪ್ರಶಾಂತ್ ಕುಮಾರ್ ತಿಳಿಸಿದ್ದಾರೆ. ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಯಾಗರಾಜ್ ನ್ಯಾಯಾಲಯದ ಎದುರು (6ನೇ ಪುಟಕ್ಕೆ)

## ಬಿಬಿಸಿ ವಿರುದ್ಧ ಫೆಮಾ ಪ್ರಕರಣ

ನವದೆಹಲಿ ಏ. 13 – ವಿದೇಶಿ ವಿನಿಮಯ ಕಾಯ್ದೆ ಉಲ್ಲಂಘಿಸಿದ ಆರೋಪದ ಮೇಲೆ ಬಿಬಿಸಿ ಇಂಡಿಯಾ ವಿರುದ್ಧ ಜಾರಿ ನಿರ್ದೇಶನಾಲಯವು ಫೆಮಾ (ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ) ಪ್ರಕರಣ ದಾಖಲಿಸಿದೆ ಎಂದು ಮೂಲಗಳು ತಿಳಿಸಿವೆ. ಎರಡು ತಿಂಗಳ ಹಿಂದಷ್ಟೇ ಆದಾಯ ತೆರಿಗೆ ಇಲಾಖೆಯು ಬಿಬಿಸಿ ಇಂಡಿಯಾದಲ್ಲಿ ಶೋಧ ನಡೆಸಿತ್ತು. ಬಿ.ಬಿ.ಸಿ. ಇಂಡಿಯಾ ಪ್ರಸಾರ ಸಂಸ್ಥೆಯು ವಿದೇಶಿ ನೇರ ಹೂಡಿಕೆ ನಿಯಮಗಳನ್ನು ಉಲ್ಲಂಘಿಸಿದೆ ಎಂದು ಆದಾಯ ತೆರಿಗೆ ಇಲಾಖೆಯು ಶೋಧ ಕಾರ್ಯ ನಡೆಸಿತ್ತು.

# ಜಿಲ್ಲೆಯ 29 ಚೆಕ್‌ಪೋಸ್ಟ್‌ಗಳ ಕಾರ್ಯನಿರ್ವಹಣೆ, ನೇರ ದೃಶ್ಯ ಸೆರೆ

ದಾವಣಗೆರೆ,ಏ.13 - ಜಿಲ್ಲೆಯಲ್ಲಿ 7 ವಿಧಾನಸಭಾ ಕ್ಷೇತ್ರಗಳಿದ್ದು ನೀತಿ ಸಂಹಿತೆ ಕಟ್ಟುನಿಟ್ಟಿನ ಜಾರಿಗೆ 29 ಕಡೆ ಚೆಕ್‌ಪೋಸ್ಟ್‌ಗಳು ಕಾರ್ಯನಿರ್ವಹಿಸುತ್ತಿವೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಶಿವಾನಂದ ಕಾಪಶಿ ತಿಳಿಸಿದ್ದಾರೆ.

ಚೆಕ್‌ಪೋಸ್ಟ್‌ಗಳಲ್ಲಿ ಸಿಬ್ಬಂದಿಗಳು ಮೂರು ಪಾಳಿಯಲ್ಲಿ ಕರ್ತವ್ಯ ನಿರ್ವಹಿಸಲಿದ್ದು, ದಿನದ 24 ಗಂಟೆಯು ಕಾರ್ಯನಿರ್ವಹಿಸುತ್ತಿವೆ. ಮತ್ತು ಇದರ ನೇರ ದೃಶ್ಯಾವಳಿಗಳನ್ನು ಸೆರೆಹಿಡಿಯಲು ಸಿಸಿ ಕ್ಯಾಮೆರಾ ಅಳವಡಿಸಲಾಗಿದೆ. ಇದರ ದೃಶ್ಯಾವಳಿಗಳ ವೀಕ್ಷಣೆ ಯನ್ನು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಸ್ಥಾಪಿಸಿರುವ ನಿಯಂತ್ರಣ ಕೊಠಡಿಯಲ್ಲಿ ವೀಕ್ಷಣೆ ಮಾಡಲಾಗುತ್ತದೆ. ಮತ್ತು ಜಿಲ್ಲಾಧಿಕಾರಿ ಸೇರಿದಂತೆ ಜಿಲ್ಲಾ ರಕ್ಷಣಾಧಿಕಾರಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿ ಕಾರಿಗಳು ಮೊಬೈಲ್‌ನಲ್ಲಿಯು ವೀಕ್ಷಣೆ ಮಾಡುವರು ಎಂದರು.

**ಕ್ಷೇತ್ರವಾರು ಚೆಕ್‌ಪೋಸ್ಟ್‌ಗಳ ವಿವರ:**

**ಜಗಳೂರು ವಿಧಾನಸಭಾ ಕ್ಷೇತ್ರ;** ಬಿದರಕೇರೆ ಚೆಕ್ ಪೋಸ್ಟ್, ಗಡಿಮಾಕುಂಟೆ, ಮುಸ್ಟೂರು ಚಳ್ಳಕೆರೆ ರೋಡ್, ಕಾನನಕಟ್ಟೆ ರೋಡ್ ಚೆಕ್ ಪೋಸ್ಟ್.

**ಹರಿಹರ ವಿಧಾನಸಭಾ ಕ್ಷೇತ್ರ;** ರಾಘವೇಂದ್ರ ಮಠ, ಹಲಸಬಾಳು ಕ್ರಾಸ್, ಕುರುಬರಹಳ್ಳಿ, ಮಲೇಬೆನ್ನೂರಿನ ನಂದಿಗುಡಿ ಚೆಕ್ ಪೋಸ್ಟ್,

**ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರ;** ಭೂಮಿಕ ನಗರ ಚೆಕ್ ಪೋಸ್ಟ್, ಲೋಕಿಕೆರೆ, ಶಾಮ ನೂರು ಕ್ರಾಸ್ ರೋಡ್, ವಿದ್ಯಾನಗರ ಲಾಸ್ಟ್ ಬಸ್ ಸ್ಟಾಂಡ್, ಮಾಗಾನಹಳ್ಳಿ ರೋಡ್ ಚೆಕ್ ಪೋಸ್ಟ್.

**ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರ;** ಬಾಡ ಕ್ರಾಸ್, ಬೇತೂರ್ ರೋಡ್, ಕೊಂಡಜ್ಜಿ ರೋಡ್, ಹರಿಹರ ರೋಡ್ (ಸಾಯಿ ಇಂಟರ್ ನ್ಯಾಷನಲ್) ಚೆಕ್ ಪೋಸ್ಟ್.

**ಮಾಯಕೊಂಡ ವಿಧಾನಸಭಾ ಕ್ಷೇತ್ರ;** ಹೆಬ್ಬಾಳ್ ಟೋಲ್‌ಗೇಟ್ ಚೆಕ್ ಪೋಸ್ಟ್, ಕಾರಿಗನೂರು ಕ್ರಾಸ್, ಹೆಚ್.ಬಸಾಪುರ,

**ಚನ್ನಗಿರಿ ವಿಧಾನಸಭಾ ಕ್ಷೇತ್ರ;** ಜೋಳದಾಳ್ ಚೆಕ್ ಪೋಸ್ಟ್, ಮಾವಿನಕಟ್ಟೆ, ತಾವರೆಕೆರೆ, ಮಾದಾಪುರ, ಸಂತೆಬೆನ್ನೂರು ಚೆಕ್ ಪೋಸ್ಟ್.

**ಹೊನ್ನಾಳಿ ವಿಧಾನಸಭಾ ಕ್ಷೇತ್ರ;** ಟಿ.ಜಿ ಹಳ್ಳಿ ಕ್ರಾಸ್ ಚೆಕ್ ಪೋಸ್ಟ್, ಸವಳಂಗ, ಹೊಳೆಹರಳಹಳ್ಳಿ ಕ್ರಾಸ್, ಜೀನಹಳ್ಳಿ ಕ್ರಾಸ್‌ನಲ್ಲಿ ಚೆಕ್ ಪೋಸ್ಟ್ ಸ್ಥಾಪಿಸಲಾಗಿದೆ.

# ದೇಶದ ಹಲವೆಡೆ ಬಿಸಿಗಾಳಿಯ ಎಚ್ಚರಿಕೆ

ನವದೆಹಲಿ, ಏ. 13 – ಪಶ್ಚಿಮ ಬಂಗಾಳ, ಒಡಿಶಾ, ಆಂಧ್ರ ಪ್ರದೇಶ ಹಾಗೂ ಬಿಹಾರಗಳಲ್ಲಿ ಮುಂದಿನ ಮೂರ್ನಾಲ್ಕು ದಿನಗಳಲ್ಲಿ ಬಿಸಿಗಾಳಿಯ ಪರಿಸ್ಥಿತಿ ಇರಲಿದೆ ಎಂದು ಹವಾಮಾನ ಇಲಾಖೆ ಎಚ್ಚರಿಸಿದೆ.

ಮುಂದಿನ ಮೂರ್ನಾಲ್ಕು ದಿನಗಳಲ್ಲಿ ಈ ಭಾಗಗಳಲ್ಲಿ ತಾಪಮಾನ 40 ರಿಂದ 42 ಡಿಗ್ರಿ ಸೆಲ್ಸಿಯಸ್ ಇರಲಿದೆ ಎಂದು ಇಲಾಖೆ ಹೇಳಿದೆ.

ಅಲ್ಲದೇ, ಪಶ್ಚಿಮ ಹಿಮಾಲಯ ಭಾಗ, ಈಶಾನ್ಯ ಭಾರತ, ಪಶ್ಚಿಮ ಬಂಗಾಳ, ಸಿಕ್ಕಿಂ, ಒಡಿಶಾ, ಕರಾವಳಿ ಆಂಧ್ರ ಪ್ರದೇಶ ಹಾಗೂ ಕೇರಳಗಳಲ್ಲಿ ತಾಪಮಾನ ಸಾಮಾನ್ಯಕ್ಕಿಂತ ಮೂರರಿಂದ ಐದು ಡಿಗ್ರಿ ಸೆಲ್ಸಿಯಸ್ ಹೆಚ್ಚಾಗಿರಲಿದೆ ಎಂದು ತಿಳಿಸಲಾಗಿದೆ.

ಬಯಲು ಪ್ರದೇಶದಲ್ಲಿ ತಾಪಮಾನ 40 ಡಿಗ್ರಿಗಿಂತ ಹೆಚ್ಚಾಗಿದ್ದಾಗ, ಕರಾವಳಿಯಲ್ಲಿ 37 ಡಿಗ್ರಿ ಸೆಲ್ಸಿಯಸ್, ಬೆಟ್ಟ ಪ್ರದೇಶಗಳಲ್ಲಿ 30 ಡಿಗ್ರಿ ಸೆಲ್ಸಿಯಸ್‌ಗಿಂತ ಹೆಚ್ಚಾಗಿದ್ದಾಗ ಮತ್ತು ತಾಪಮಾನ ಸಾಮಾನ್ಯಕ್ಕಿಂತ ಕನಿಷ್ಠ 4.5 ಡಿಗ್ರಿ ಸೆಲ್ಸಿಯಸ್ ಹೆಚ್ಚಾಗಿದ್ದಾಗ ಬಿಸಿಗಾಳಿ ಪರಿಸ್ಥಿತಿ ಘೋಷಿಸಲಾಗುತ್ತದೆ.

ದೇಶದ ದಕ್ಷಿಣ ಹಾಗೂ ಪಶ್ಚಿಮದ ಕೆಲ ಭಾಗಗಳನ್ನು ಹೊರತು ಪಡಿಸಿ ಉಳಿದ ಎಲ್ಲಾ ಭಾಗಗಳಲ್ಲಿ ಏಪ್ರಿಲ್‌ನಿಂದ ಜೂನ್‌ವರೆಗೆ ತಾಪಮಾನ ವಾಡಿಕೆಗಿಂತ ಹೆಚ್ಚಾಗಿರಲಿದೆ ಎಂದು ಹವಾಮಾನ ಇಲಾಖೆ ಈ ಹಿಂದೆ ತಿಳಿಸಿತ್ತು.










# ಏನ್ ಬಿಸಿಲಪ್ಪಾ..? ಬಿಸಿಲಿಗೆ ಬಸವಳಿದ ದೇವನಗರಿ ಜನತೆ

**ಕಳೆದ ಕೆಲ ದಿನಗಳಿಂದ ತಾಪಮಾನ 39 ಡಿಗ್ರಿ ದಾಖಲು**

ದಾವಣಗೆರೆ: ಬೇಸಿಗೆಯ ಬಿಸಿಲಿಗೆ ಜನತೆ ಬಸವಳಿಯಲಾರಂಭಿಸಿದ್ದಾರೆ. ತುಸು ತಡವಾದರೂ, ಝಳ ಬೆವರಿಳಿಸುತ್ತಿದೆ. ಮಧ್ಯಾಹ್ನವಾಗುತ್ತಲೇ ಜನತೆ ಹೊರ ಬರಲು ಹಿಂಜರಿಯಲಾರಂಭಿಸಿದ್ದಾರೆ.

ಸೂರ್ಯ ಮೇಲೇರುತ್ತಿದ್ದಂತೆ ತಾಪ ಹೆಚ್ಚಾಗುತ್ತಿದೆ. ಜನರ ಮುಖದಲ್ಲಿ ಬೆವರು. ಮನೆ, ಕಚೇರಿಗಳಲ್ಲಿ ಫ್ಯಾನ್‌ಗಳ ತಿರುಗುವಿಕೆಯ ವೇಗ ಹೆಚ್ಚುತ್ತಿದೆ. 'ಅಬ್ಬಾ ಏನ್ ಬಿಸಿಲಪ್ಪಾ?' ಇದು ಸದ್ಯದ ಪರಿಸ್ಥಿತಿಯಲ್ಲಿ ಹೊರ ಬರುವ ಸಾಮಾನ್ಯ ಮಾತು.

ಹೌದು, ಹವಾಮಾನ ವೈಪರೀತ್ಯದಿಂದಾಗಿ ತಡವಾಗಿ ಸುರಿದ ಮಳೆಗಾಲ ಹಾಗೂ ಚಳಿಗಾಲ ಪರಿಣಾಮ ಮಾರ್ಚ್‌ನಲ್ಲಿ ಬಿಸಿಲಿನ ಧಗೆ ಅಷ್ಟಾಗಿ ಬಾಧಿಸಿರಲಿಲ್ಲ. ಏಪ್ರಿಲ್ ಆಗಮಿಸುತ್ತಲೇ ವರುಣನ ಪ್ರತಾಪ ಹಚ್ಚಾಗಿದ್ದು, ಜನತೆ ಅಕ್ಷರಷಃ ಬಿಸಿಲಿಗೆ ಬೆವರುತ್ತಿದ್ದಾರೆ ಬೆದರುತ್ತಿದ್ದಾರೆ ಕೂಡ.

ಬಿಸಿಲಿಗೆ ಛತ್ರಿ, ದುಪ್ಪಟ್ಟ, ಕ್ಯಾಪ್‌ಗಳ ಮೊರೆ ಹೋಗುತ್ತಿದ್ದಾರೆ ಜನ. ಹತ್ತು ನಿಮಿಷ ಕರೆಂಟ್ ಕೈ ಕೊಟ್ಟರೂ ಕುಳಿತುಕೊಳ್ಳಲಾಗದು.

ರಾತ್ರಿ ವೇಳೆಯಂತೆ ಅರ್ಧಗಂಟೆ ಕರೆಂಟ್ ಹೋಯಿತಂದರೆ ನರಕ ದರ್ಶನ ಮಾಡಿದಂತಹ ಅನುಭವ. ಸೆಕೆ ತಾಳಲಾರದೆ ಮನೆ ಮಂದಿ ಎಲ್ಲಾ ಎದ್ದು ಗಾಳಿಗಾಗಿ ಹೊರ ಬಂದು ಕೂರುವ ಪರಿಸ್ಥಿತಿ. ಜೊತೆಗೆ ವಿದ್ಯುತ್ ಕಡಿತ ಮಾಡಿದ ಬೆಸ್ಕಾಂ ಇಲಾಖೆಗೆ ನೂರು ಜನ್ಮಕ್ಕೂ ತಾಳಲಾರದಷ್ಟು ಶಾಪಗಳ ಸುರಿಮಳೆ.

ಸದ್ಯ ತಂಪು ಪಾನೀಯಗಳಿಗೆ ಡಿಮ್ಯಾಂಡ್ ಹೆಚ್ಚಾಗಿದೆ. ಕಲ್ಲಂಗಡಿ, ಕರಬೂಜ ಹಣ್ಣುಗಳ ಕೊಳ್ಳುವಿಕೆ ಹೆಚ್ಚಾಗಿದೆ. ಕಬ್ಬಿನ ಹಾಲು, ಜ್ಯೂಸ್ ಅಂಗಡಿಗಳಿಗೆ ಜನ ಮುಗಿಬೀಳಲಾರಂಭಿಸಿದ್ದಾರೆ.

ಇಲ್ಲೇ ಇಷ್ಟು, ಇನ್ನು ಅಲ್ಲಿನ ಜನ ಹೋಗೋ? ಎಂದು ಬಳ್ಳಾರಿ, ಕಲಬುರ್ಗಿ, ಬೀದರ್ ಜನರ ಬಗ್ಗೆ ಅನುಕಂಪದ ಮಾತುಗಳೂ ಕೇಳಿ ಬರುತ್ತಿವೆ.

ಸದ್ಯ ದಾವಣಗೆರೆಯಲ್ಲಿ ತಾಪಮಾನ 39 ಡಿಗ್ರಿ ಗರಿಷ್ಠ ಮಟ್ಟ ದಾಖಲಾಗಿದೆ. ಬರುವ ಸೋಮವಾರ 40 ಡಿಗ್ರಿ ತಲುಪಲಿದೆ ಎಂದು ಹಮಾಮಾನ ವರದಿ ಹೇಳುತ್ತಿದೆ.

# ಮಲೇಬೆನ್ನೂರು ಸಂತೆಯಲ್ಲಿ ಮತದಾನ ಜಾಗೃತಿ




ಮಲೇಬೆನ್ನೂರು, ಏ.13- ಇಲ್ಲಿನ ಪುರಸಭೆ ವತಿಯಿಂದ ಗುರುವಾರ ಪಟ್ಟಣದಲ್ಲಿ ನಡೆದ ವಾರದ ಸಂತೆಯಲ್ಲಿ ಮತದಾನ ಕುರಿತು ಜಾಗೃತಿ ಮೂಡಿಸಲಾಯಿತು.

ಸಂತೆಗೆ ಆಗಮಿಸಿದ್ದ ವರ್ತಕರಿಗೆ ಹಾಗೂ ಹಳ್ಳಿ ಜನರಿಗೆ ಮೇ 10 ರಂದು ನಡೆಯುವ ವಿಧಾನಸಭಾ ಚುನಾವಣೆಯಲ್ಲಿ ಕಡ್ಡಾಯವಾಗಿ ಮತದಾನ ಮಾಡುವ ಮೂಲಕ ಪ್ರಜಾಪ್ರಭುತ್ವ ಉಳಿಸಿ ಎಂದು ಕರ ಪತ್ರ ನೀಡಿ ಮನವಿ ಮಾಡಲಾಯಿತು.

ಪುರಸಭೆ ಮುಖ್ಯಾಧಿಕಾರಿ ಎಂ. ಸುರೇಶ್, ಪುರಸಭೆ ಅಧಿಕಾರಿಗಳಾದ ಏಕನಾಥ್, ದಿನಕರ್, ಉಮೇಶ್, ಪ್ರಭು, ಹಾಲೇಶಪ್ಪ, ನವೀನ್ ಸೇರಿದಂತೆ ಪುರಸಭೆ ಸಿಬ್ಬಂದಿ ಹಾಗೂ ಪೌರ ಕಾರ್ಮಿಕರು ಮತದಾನ ಜಾಗೃತಿಯಲ್ಲಿ ಹಾಜರಿದ್ದರು.

# 221 ನಾಮಪತ್ರ ಸಲ್ಲಿಕೆ

(3ನೇ ಪುಟದಿಂದ) ಪೈಪೋಟಿ ನಡೆಯುವುದು ನಿಶ್ಚಿತವಾಗಿದ್ದು, ಬಹುತೇಕ ಕ್ಷೇತ್ರಗಳಲ್ಲಿ ತ್ರಿಕೋನ ಸ್ಪರ್ಧೆ ನಡೆಯಲಿದ್ದು, ಆಡಳಿತಾರೂಢ ಬಿಜೆಪಿ, ಪ್ರಮುಖ ಪ್ರತಿಪಕ್ಷಗಳಾದ ಕಾಂಗ್ರೆಸ್ ಮತ್ತು ಜೆಡಿಎಸ್ ನಡುವೆ ನೇರ ಹಣಾಹಣಿ ನಡೆಯುವುದು ನಿಶ್ಚಿತವಾಗಿದೆ. ಈ ಮಧ್ಯೆ ಅರವಿಂದ ಕೇಜ್ರಿವಾಲ್ ನೇತೃತ್ವದ ಆಮ್ ಆದ್ಮಿ ಪಕ್ಷ, ಗಾಲಿ ಜನಾರ್ದನರೆಡ್ಡಿ ಅವರ ಕರ್ನಾಟಕ ರಾಜ್ಯ ಪ್ರಗತಿ ವಿಕಾಸ ಪಕ್ಷ ಸೇರಿದಂತೆ ಹಲವು ಪಕ್ಷಗಳು ತಮ್ಮ ಅದೃಷ್ಟ ಪರೀಕ್ಷೆಗೆ ಮುಂದಾಗಿವೆ.

ನಾಮಪತ್ರ ಸಲ್ಲಿಕೆಗೆ ಏಪ್ರಿಲ್ 20 ಕಡೆಯ ದಿನವಾಗಿದ್ದು, ನಾಮಪತ್ರಗಳ ಪರಿಶೀಲನೆ ಕಾರ್ಯ ಏಪ್ರಿಲ್ 21 ರಂದು ನಡೆಯಲಿದೆ. ನಾಮಪತ್ರ ಹಿಂತೆಗೆದುಕೊಳ್ಳಲು ಏಪ್ರಿಲ್ 24 ಕೊನೆಯ ದಿನವಾಗಿರುತ್ತದೆ. ನಾಮಪತ್ರ ಸಲ್ಲಿಕೆಗೆ ಕೇವಲ ಏಳು ದಿನಗಳ ಕಾಲಾವಕಾಶವಿದ್ದು, ಇದರಲ್ಲಿ ಎರಡು ದಿನಗಳ ಸಾರ್ವತ್ರಿಕ ರಜೆ ಇದ್ದು, ಆ ದಿನಗಳಲ್ಲಿ ನಾಮಪತ್ರ ಸಲ್ಲಿಸಲು ಅವಕಾಶವಿರುವುದಿಲ್ಲ.

# ಇಂದು 'ಬೆಳಕು ಹಂಚಿದ ಬಾಲಕ' ನಾಟಕ ಪ್ರದರ್ಶನ, ಅಂಬೇಡ್ಕರ್ ಜಯಂತಿ

ದಾವಣಗೆರೆ ಕೆಟಿಜೆ ನಗರ 2 ನೇ ಮುಖ್ಯರಸ್ತೆ, 10 ನೇ ಕ್ರಾಸ್‌ನಲ್ಲಿರುವ ಬಾಬಾ ಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ಯುವ ಸ್ನೇಹ ಬಳಗದ ವತಿಯಿಂದ ಶ್ರೀ ಮಲ್ಲಿಕಾರ್ಜುನ ಸಮುದಾಯ ಭವನದಲ್ಲಿ ಅಂಬೇಡ್ಕರ್ ಜಯಂತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಬೆಳಿಗ್ಗೆ 8.30 ಕ್ಕೆ ಮಲ್ಲಿಕಾರ್ಜುನ ಸಮುದಾಯ ಭವನದಿಂದ ಅಂಬೇಡ್ಕರ್ ಭಾವಚಿತ್ರದ ಮೆರವಣಿಗೆ ಆರಂಭಿಸಿ, ಶಿವಪ್ಪಯ್ಯ ವೃತ್ತದ ಮೂಲಕ ಅಂಬೇಡ್ಕರ್ ವೃತ್ತಕ್ಕೆ ತೆರಳಿ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡುವ ಮೂಲಕ ನಮನಗಳನ್ನು ಸಲ್ಲಿಸಲಾಗುವುದು.

ಸಂಜೆ 5 ಕ್ಕೆ ಮಲ್ಲಿಕಾರ್ಜುನ ಸಮುದಾಯ ಭವನ ದಲ್ಲಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ನಿವೃತ್ತ ಪ್ರಾಂಶುಪಾಲರಾದ ಸಿ.ಕೆ. ಮಹೇಶ್ವರಪ್ಪ ಅಧ್ಯಕ್ಷತೆ ವಹಿಸುವರು. ಪ್ರೊ.ಎ.ಬಿ. ರಾಮಚಂದ್ರಪ್ಪ ಅವರು 'ಅಂಬೇಡ್ಕರ್ ಬಾಲ್ಯ, ಬದುಕು, ಹೋರಾಟ' ಕುರಿತು, ಶ್ರೀಮತಿ ಸುನಂದಾ ದುರ್ಗೇಶ್ 'ಮಹಿಳಾ ಜಾಗೃತಿ, ಮಹಿಳಾ ಕಾನೂನು' ಕುರಿತು ಉಪನ್ಯಾಸ ನೀಡಲಿದ್ದಾರೆ.

ಮುಖ್ಯ ಅತಿಥಿಗಳಾಗಿ ರಂಗಾಯಣ ರಂಗ ನಿರ್ದೇಶಕ ದೇವರಾಜ್ ಮಳೇಹಳ್ಳಿ, ನ್ಯಾಯವಾದಿ ಹೆಚ್.ಎನ್. ಸುಧಾ ಮತ್ತಿತರರು ಭಾಗವಹಿಸಲಿದ್ದಾರೆ.

ರಂಗ ಅನಿಕೇತನ ಮಕ್ಕಳಿಂದ 'ಬೆಳಕು ಹಂಚಿದ ಬಾಲಕ' ನಾಟಕ ಪ್ರದರ್ಶನ ಏರ್ಪಡಿಸಲಾಗಿದೆ. ಇದೇ ಸಂದರ್ಭದಲ್ಲಿ 2021-22 ನೇ ಸಾಲಿನಲ್ಲಿ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಿದ ಪ್ರತಿಭಾವಂತ ವಿದ್ಯಾರ್ಥಿ ಗಳನ್ನು ಪುರಸ್ಕರಿಸಲಾಗುವುದು ಎಂದು ವಕೀಲ ದುರುಗೇಶ್ ಗುಡಿಗೇರಿ ತಿಳಿಸಿದ್ದಾರೆ.

# ನಗರಕ್ಕೆ ಅನೇಕ ಶಾಶ್ವತ ಯೋಜನೆಗಳನ್ನು ಕೊಟ್ಟ ತೃಪ್ತಿ ನಮಗಿದೆ : ಎಸ್ಸೆಸ್ಸೆಂ



ದಾವಣಗೆರೆ, ಏ.13- ಬರೀ ಗಲೀಜು ತುಂಬಿದ್ದ ಕುಂದುವಾಡ ಕೆರೆಯನ್ನು ಅಭಿವೃದ್ಧಿ ಪಡಿಸಿ ನಗರದ ಜನತೆಗೆ ಹೊಳೆಯ ನೀರು ಕೊಟ್ಟ ಕೀರ್ತಿ ನನಗಿದೆ. 265 ಎಕರೆ ವ್ಯಾಪ್ತಿಯ 5.5 ಕಿ.ಮೀ. ಸುತ್ತಳತೆ ಹೊಂದಿರುವ ಕೆರೆಯಿಂದ ಕುಡಿಯುವ ನೀರಿನ ಜೊತೆಗೆ ಅಂತರ್‌ಜಲವೂ ಅಭಿವೃದ್ದಿಯಾಗಿದೆ. ಇಂತಹ ಅನೇಕ ಶಾಶ್ವತ ಯೋಜನೆಗಳನ್ನು ಪೂರ್ಣಗೊಳಿಸಿದ ತೃಪ್ತಿ ನನಗಿದೆ ಎಂದು ದಾವಣಗೆರೆ ಉತ್ತರ ವಲಯ ಕಾಂಗ್ರೆಸ್ ಅಭ್ಯರ್ಥಿ ಎಸ್.ಎಸ್. ಮಲ್ಲಿಕಾರ್ಜುನ್ ಹೇಳಿದರು.

ಬರುವ ಮೇ 10ರಂದು ನಡೆಯಲಿರುವ ವಿಧಾನಸಭಾ ಚುನಾವಣಾ ಅಂಗವಾಗಿ ನಗರದ 44ನೇ ವಾರ್ಡ್‌ನ ಎಸ್.ಎಸ್. ಲೇ-ಔಟ್, ಶಾಂತಿನಗರ, ಚಿಗಟೇರಿ ಬಡಾವಣೆ ಸುತ್ತ-ಮುತ್ತ ಮನೆ ಮನೆಗೆ ತೆರಳಿ ಮತಯಾಚನೆ ಮಾಡಿ, ಮತದಾರರನ್ನು ಉದ್ದೇಶಿಸಿ ಅವರು ಮಾತನಾಡಿದರು.

ಅದೇ ರೀತಿ ಟಿ.ವಿ.ಸ್ಟೇಷನ್ ಕೆರೆಯ ಹೂಳು ತೆಗೆದು, ಆಳವನ್ನು ಹೆಚ್ಚಿಸಿದಾಗ ಸುತ್ತ ಮುತ್ತ ಪ್ರದೇಶಗಳಲ್ಲಿ ಉತ್ತಮ ಅಂತರ್‌ಜಲ ವೃದ್ಧಿಯಾಗಿದೆ. ಇದು ನಗರದ ಅಭಿವೃದ್ಧಿಗೆ ಕಾರಣವಾಗಿದೆ ಎಂದರು. ಯುಜಿಡಿ, ರಿಂಗ್ ರೋಡ್, ಫ್ಲೈ ಓವರ್ ಆರಂಭ ಮಾಡಿದ್ದೇ ನಾವು. ಆದರೆ ಅವನ್ನೆಲ್ಲ ನಾವೇ ಮಾಡಿದ್ದೇವೆ ಎಂದು ತರಾತುರಿಯಲ್ಲಿ ಓಪನ್ ಮಾಡಿ ತಮ್ಮ ಹೆಸರಿನ ಬೋರ್ಡ್ ಹಾಕಿಕೊಂಡಿರುವ ಬಿಜೆಪಿಯವರು, ಯಾವುದೇ ಶಾಶ್ವತ ಯೋಜನೆಯನ್ನೂ ಮಾಡದೇ ಬರೀ ಭ್ರಷ್ಟಾಚಾರ ನಡೆಸಿದ್ದಾರೆ.

ಕೋವಿಡ್ ಸಂದರ್ಭದಲ್ಲಿ ನಮ್ಮ ಸ್ವಂತ ದುಡ್ಡಿನಲ್ಲಿ ಲಸಿಕೆ ತರಿಸಿ ನಗರದ ಜನತೆಗೆ ನೀಡಿದ್ದೇವೆ. ಆ ಸಂದರ್ಭದಲ್ಲಿ ಏನೂ ಕೆಲಸ ಮಾಡದೇ ವೆಂಟಿಲೇಷನ್ ಖರೀದಿಯಲ್ಲಿಯೂ ಲಂಚ ಪಡೆದು, ದಾನಿಗಳ ಹೆಸರು ಹಾಕಿದ ಬಿಜೆಪಿಯವರು, ಶೇಕಡ 40 ಲಂಚದಲ್ಲಿಯೇ ಜೀವನ ನಡೆಸತೊಡಗಿದ್ದಾರೆ ಎಂದು ಟೀಕಿಸಿದರು.

ಕಾಂಗ್ರೆಸ್ ಸರ್ಕಾರವಿದ್ದಾಗ, ಪಿ.ಬಿ.ರಸ್ತೆಗೆ ಹೊಂದಿಕೊಳ್ಳುವ ಎಲ್ಲ ಮುಖ್ಯ ರಸ್ತೆಗಳನ್ನು ಅಭಿವೃದ್ಧಿ ಮಾಡಿದ ಕಾರಣದಿಂದ ಜಮೀನುಗಳಿಗೂ ಉತ್ತಮ ಬೆಲೆ ಬಂದಿದೆ. ನಗರದಲ್ಲಿ ಇನ್ನೂ ಸಾಕಷ್ಟು ಅಭಿವೃದ್ಧಿ ಕೆಲಸ ಆಗಬೇಕಾಗಿದೆ. ಹೊಸ-ಹೊಸ ಲೇ-ಔಟ್‌ಗಳಾಗಬೇಕು. ಯಾವುದೇ ಆಗಲಿ ಒಂದು ಗುರಿ ಇಟ್ಟುಕೊಂಡು ಮುಂದುವರೆದಾಗ ಮಾತ್ರ ಶಾಶ್ವತ ಕೆಲಸಗಳಾಗುತ್ತವೆ. ಆದ್ದರಿಂದ ಅಭಿವೃದ್ಧಿ ಕೆಲಸ ನನಗೆ ಬಿಡಿ, ನನ್ನನ್ನು ಮತ್ತು ಜಿಲ್ಲೆಯ ಎಲ್ಲ ಕಾಂಗ್ರೆಸ್ ಅಭ್ಯರ್ಥಿಗಳನ್ನು ಗೆಲ್ಲಿಸುವಂತೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರಾದ ಶಿವನಹಳ್ಳಿ ರಮೇಶ್, ರಾಮಮೂರ್ತಿ, ಮೇಕಾ ಮುರಳಿಕೃಷ್ಣ, ಈಶ್ವರ್ ಸಿಂಗ್, ಕುಂದುವಾಡ ದೊಡ್ಡಪ್ಪ, ಡಾ.ರವೀಂದ್ರ ಬಣಕಾರ್, ಕುಂದುವಾಡ ತಿಪ್ಪಣ್ಣ, ಜೆ.ಮಾರುತಿ, ಕಂಚಿಕೇರಿ ಮಹೇಶ್, ಪರಮೇಶ್ವರಗೌಡ್ರು, ಲಿಂಗರಾಜ್, ಚಂದ್ರಪ್ಪ, ಬಸವರಾಜ, ಡಾ.ಬಿ.ಹೆಚ್.ಮಂಜುನಾಥ್, ದೇವಿಗೆರೆ ಪ್ರಭಾಕರ್ ಮತ್ತಿತರರು ಪ್ರಚಾರ ಕಾರ್ಯದಲ್ಲಿ ಭಾಗವಹಿಸಿದ್ದರು.

ರಿಂಗ್ ರಸ್ತೆಯಲ್ಲಿರುವ ಕರ್ನಲ್ ರವೀಂದ್ರನಾಥ್ ವೃತ್ತದಲ್ಲಿ ಬಿಸಿಲಿಗೆ ಕಾದಿದ್ದ ರಸ್ತೆಗೆ ಟ್ಯಾಂಕರ್ ನೀರು ಹಾಕಿಸಿ ತಂಪುಗೊಳಿಸಿದ ಅಭಿಮಾನಿಗಳು, 18 ಅಡಿ ಎತ್ತರದ ಪುಷ್ಪ ಮಾಲೆಯನ್ನು ಎಸ್.ಎಸ್.ಮಲ್ಲಿಕಾರ್ಜುನ್ ಅವರಿಗೆ ಹಾಕುವ ಮೂಲಕ ಸ್ವಾಗತಿಸಿದರು.

# 16ರಂದು ನಗರದಲ್ಲಿ ರಾಜ್ಯ ಮಟ್ಟದ ಎಂ.ಎಸ್. ಶಿವಣ್ಣ ಗೌರವಾರ್ಥ ಲಿಖಿತ ಕ್ವಿಜ್

ದಾವಣಗೆರೆ, ಏ.13- ನಗರದ ಸಿದ್ಧಗಂಗಾ ವಿದ್ಯಾಸಂಸ್ಥೆ ಸಂಸ್ಥಾಪಕರಾದ ಎಂ.ಎಸ್.ಶಿವಣ್ಣ ಅವರ ಗೌರವಾರ್ಥ ವಾಗಿ ರಾಜ್ಯ ಮಟ್ಟದ ಎಂ.ಎಸ್.ಎಸ್– 2023 ಕ್ವಿಜ್ ಅನ್ನು ಇದೇ ದಿನಾಂಕ 16ರ ಭಾನುವಾರ ಸಿದ್ಧಗಂಗಾ ವಿದ್ಯಾಸಂಸ್ಥೆಯಲ್ಲಿ ಆಯೋಜಿಸಲಾಗಿದೆ ಎಂದು ಸಂಸ್ಥೆಯ ನಿರ್ದೇಶಕ ಡಾ.ಡಿ.ಎಸ್.ಜಯಂತ್ ಅವರು ಇಂದಿಲ್ಲಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಪ್ರಸಕ್ತ ವರ್ಷ ಎಸ್.ಎಸ್.ಎಲ್.ಸಿ ಮತ್ತು ಕೇಂದ್ರ ಪಠ್ಯಕ್ರಮದಲ್ಲಿ ಎಸ್.ಎಸ್.ಸಿ ಪರೀಕ್ಷೆ ಬರೆದಿರುವ ಮಕ್ಕಳು ಕ್ವಿಜ್‌ನಲ್ಲಿ ಭಾಗವಹಿಸಲಿದ್ದು, ಲಿಖಿತ ಕ್ವಿಜ್ 10 ನೇ ತರಗತಿ ವಿಜ್ಞಾನ ಮತ್ತು ಗಣಿತ ಎನ್‌ಸಿಇಆರ್‌ಟಿ ಪುಸ್ತಕಾಧಾರಿತ ಬಹು ಆಯ್ಕೆಯ 60 ಪ್ರಶ್ನೆಗಳನ್ನೊಳಗೊಂಡಿರುತ್ತದೆ ಎಂದರು.

ಇದೇ ದಿನಾಂಕ 16 ರ ಭಾನುವಾರ ಬೆಳಿಗ್ಗೆ 9 ಗಂಟೆಯಿಂದ ನೋಂದಣಿ ಮತ್ತು ಪ್ರವೇಶ ಪತ್ರ ನೀಡಲಾಗುತ್ತದೆ , 11 ಗಂಟೆಗೆ ಪ್ರಾರಂಭವಾಗುವ ಲಿಖಿತ ಕ್ವಿಜ್‌ನ್ನು ಮಕ್ಕಳು ಓ.ಎಂ.ಆರ್ ಶೀಟ್‌ನಲ್ಲಿ ಉತ್ತರಿಸುವರು, ವಿಜ್ಞಾನದ 30, ಗಣಿತದ 30 ಪ್ರಶ್ನೆಗಳಿಗೆ ಉತ್ತರಿಸಲು 60 ನಿಮಿಷಗಳ ಕಾಲಾವಕಾಶವಿರುತ್ತದೆ. ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮದ ಪ್ರತ್ಯೇಕ ಪ್ರಶ್ನೆಪತ್ರಿಕೆಗಳಿರಲಿವೆ ಎಂದು ತಿಳಿಸಿದರು.

**ಎಂ.ಎಸ್.ಎಸ್ ಕ್ವಿಜ್‌ನ ಆಕರ್ಷಕ ಬಹುಮಾನಗಳು:** ಪ್ರಥಮ 25000, ದ್ವಿತೀಯ 15000 ಮತ್ತು ತೃತೀಯ 10000 ರೂ. ಗಳ ನಗದು ಬಹುಮಾನ, ಆಕರ್ಷಕ ಸ್ಮರಣಿಕೆ, ಮೆಡಲ್ ಮತ್ತು ಪ್ರಶಸ್ತಿ ಫಲಕ ಒಳಗೊಂಡಿರುತ್ತದೆ. ಜೊತೆಗೆ ತಲಾ 1000 ರೂ.ಗಳ 10 ಸಮಾಧಾನಕರ ಬಹುಮಾನ ಮತ್ತು 1000 ಮಕ್ಕಳಿಗೆ ಎಂ.ಎಸ್.ಎಸ್ ಕ್ವಿಜ್ ಮೆಡಲ್ ವಿತರಿಸಲಾಗುವುದು ಎಂದರು. ಆಸಕ್ತರು 8073054295 ಮೊಬೈಲ್ ನಂಬರ್‌ಗೆ ವಾಟ್ಸಾಪ್ ಮೂಲಕ ಹೆಸರು ನೊಂದಾಯಿಸಿಕೊಳ್ಳಬಹುದಾಗಿದೆ.

ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಮುಖ್ಯಸ್ಥರಾದ ಶ್ರೀಮತಿ ಜಸ್ಟಿನ್ ಡಿ ಸೌಜ, ಕಾರ್ಯದರ್ಶಿ ಡಿ.ಎಸ್ ಹೇಮಂತ್, ಪ್ರೌಢಶಾಲೆಯ ಮುಖ್ಯ ಶಿಕ್ಷಕಿ ರೇಖಾರಾಣಿ ಮತ್ತಿತರರಿದ್ದರು.

# ನೀತಿ ಸಂಹಿತೆ ಉಲ್ಲಂಘನೆ: ಇಲ್ಲಿವರೆಗೆ 1.60 ಕೋಟಿ ವಸ್ತುಗಳ ವಶ

ದಾವಣಗೆರೆ, ಏ.13- ಸಾರ್ವತ್ರಿಕ ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ನೀತಿ ಸಂಹಿತೆ ಜಾರಿಯಲ್ಲಿದ್ದು, ಜಿಲ್ಲೆಯಾದ್ಯಂತ ಕಟ್ಟುನಿಟ್ಟಿನ ಚೆಕ್ ಪೋಸ್ ವ್ಯವಸ್ಥೆ ಮಾಡಲಾಗಿದೆ. ಏ.12 ರಂದು ನೀತಿ ಸಂಹಿತೆ ಉಲ್ಲಂಘಿಸಿ ಸಾಗಿಸುತ್ತಿದ್ದ 5213 ಲೀ. ಮದ್ಯವನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ತಿಳಿಸಿದ್ದಾರೆ.

ಜಿಲ್ಲೆಯಾದ್ಯಂತ ವಿವಿಧ ಚೆಕ್ ಪೋಸ್ಟ್‌ಗಳಲ್ಲಿ ಕಟ್ಟುನಿಟ್ಟಿನ ತಪಾಸಣೆ ಕೈಗೊಳ್ಳಲಾಗುತ್ತಿದ್ದು, ದಾಖಲೆ ಇಲ್ಲದೇ ಸಾಗಿಸುತ್ತಿದ್ದ ನಗದು, ಚಿನ್ನಾಭರಣ ಸೇರಿದಂತೆ ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ. ಏಪ್ರಿಲ್ 12 ರ ಬೆಳಗ್ಗೆ 9 ಗಂಟೆಯಿಂದ ಏ.13 ರ ಬೆಳಗ್ಗೆ 9 ಗಂಟೆಯ ಅವಧಿಯಲ್ಲಿ ಸುಮಾರು 5,82,9890 ರೂ. ಮೌಲ್ಯದ 5213.82 ಲೀ ಮದ್ಯ ವಶಪಡಿಸಿಕೊಳ್ಳಲಾಗಿದೆ.

ಮತ್ತು ಏ.12 ರಂದು ರೂ.4.10 ಲಕ್ಷ ನಗದು ವಶಪಡಿಸಿಕೊಳ್ಳಲಾಗಿದ್ದು, ಇದುವರೆಗೆ 50,11,648 ರೂ. ನಗದು, 6145.185 ಲೀ ಮದ್ಯ ವಶಪಡಿಸಿಕೊಂಡಿದ್ದು 61,93,085 ರೂ. ಮೌಲ್ಯವಿರುತ್ತದೆ. 3.209 ಕೆ.ಜಿ ಮಾದಕ ವಸ್ತು ಅಂದಾಜು ಮೌಲ್ಯ 56,110 ರೂ. ಹಾಗೂ 48,26,735 ರೂ. ಮೌಲ್ಯದ ಇತರೆ ವಸ್ತುಗಳು ಸೇರಿದಂತೆ ಒಟ್ಟು 1.60 ಕೋಟಿಯಷ್ಟು ನಗದು ಮತ್ತು ಇತರೆ ವಸ್ತು ಗಳನ್ನು ನೀತಿ ಸಂಹಿತೆ ಆರಂಭವಾದಾಗಿನಿಂದ ಇಲ್ಲಿಯವರೆಗೆ ವಶಪಡಿಸಿಕೊಳ್ಳಲಾಗಿದೆ.

ವಶಪಡಿಸಿಕೊಂಡ ಮದ್ಯದಲ್ಲಿ 67.24 ಲೀ ಪೊಲೀಸ್ ಇಲಾಖೆ ಮತ್ತು 6077.945 ಲೀ ಅಬಕಾರಿ ಇಲಾಖೆಯಿಂದ ಕಾರ್ಯಾಚರಣೆ ಮಾಡಿ ವಶಪಡಿಸಿಕೊಳ್ಳಲಾಗಿದೆ.

## ನಗರದಲ್ಲಿ ಇಂದು ಮಜ್ಜಿಗೆ

ಕರುಣಾ ಜೀವ ಕಲ್ಯಾಣ ಟ್ರಸ್ಟ್ ವತಿಯಿಂದ ದಾನಿಗಳ ನೆರವಿನೊಂದಿಗೆ ಸಾರ್ವಜನಿಕರಿಗೆ ಉಚಿತ ಮಜ್ಜಿಗೆ ವಿತರಿಸುವ ಕಾರ್ಯಕ್ರಮವನ್ನು ಶ್ರೀ ಜಯದೇವ ಮುರುಘರಾಜೇಂದ್ರ ವೃತ್ತದಲ್ಲಿ ಹಮ್ಮಿಕೊಳ್ಳಲಾಗಿದೆ.

ನಿವೃತ್ತ ಪ್ರಾಂಶುಪಾಲ ಆರ್. ಆನಂದಪ್ಪ (ಅರ್ಚನಾ ಟೆಕ್ಸ್‌ಟೈಲ್ಸ್, ದಾವಣಗೆರೆ) ಅವರು ಇಂದಿನ ಮಜ್ಜಿಗೆ ದಾನಿಗಳಾಗಿದ್ದಾರೆ.

# ಆಸ್ತಿ 152.7 ಕೋಟಿ

(3ನೇ ಪುಟದಿಂದ) ಅವರು ಹೊಂದಿರುವ ನಗದು 34,407 ರೂ., ಬ್ಯಾಂಕ್ ಠೇವಣಿ 11.20 ಲಕ್ಷ ರೂ., ಷೇರು ಇತ್ಯಾದಿಗಳ ಹೂಡಿಕೆ 2.65 ಕೋಟಿ ರೂ., ವೈಯಕ್ತಿಕವಾಗಿ ನೀಡಿರುವ ಸಾಲ 2.02 ಕೋಟಿ ರೂ., ಆಭರಣಗಳ ಮೌಲ್ಯ 1 ಕೋಟಿ ರೂ. ಹಾಗೂ ಇತರೆ ಕ್ಲೇಮುಗಳು 8.26 ಲಕ್ಷ ರೂ. ಎಂದು ತಿಳಿಸಲಾಗಿದೆ.

ಮಲ್ಲಿಕಾರ್ಜುನ್ ಅವರು ಹೊಂದಿರುವ ಕೃಷಿ ಜಮೀನು 226.03 ಎಕರೆ, ಇದರ ಪ್ರಸಕ್ತ ಮಾರುಕಟ್ಟೆ ಮೌಲ್ಯ 7.56 ಕೋಟಿ ರೂ. ಆಗಿದೆ. ಪ್ರಭಾ ಮಲ್ಲಿಕಾರ್ಜುನ್ ಅವರು 47.11 ಎಕರೆ ಜಮೀನು ಹೊಂದಿದ್ದು, ಇದರ ಮಾರುಕಟ್ಟೆ ಮೌಲ್ಯ 95.93 ಲಕ್ಷ ರೂ.ಗಳಾಗಿದೆ.

ಮಲ್ಲಿಕಾರ್ಜುನ್ ಅವರು 53.02 ಕೋಟಿ ರೂ.ಗಳ ಕೃಷಿಯೇತರ ಜಮೀನು ಹೊಂದಿದ್ದಾರೆ. 97.50 ಲಕ್ಷ ರೂ. ಮೌಲ್ಯದ ವಾಣಿಜ್ಯ ಕಟ್ಟಡ ಹೊಂದಿದ್ದಾರೆ. ಪ್ರಭಾ ಮಲ್ಲಿಕಾರ್ಜುನ್ ಅವರು 9.33 ಕೋಟಿ ರೂ. ಮೌಲ್ಯದ ಕೃಷಿಯೇತರ ಜಮೀನು ಹೊಂದಿದ್ದಾರೆ.

ಅಲ್ಲದೇ, ಮಲ್ಲಿಕಾರ್ಜುನ್ ಹೊಂದಿರುವ ವಸತಿ ಕಟ್ಟಡಗಳ ಮೌಲ್ಯ 70.77 ಕೋಟಿ ರೂ. ಆಗಿದೆ. ಪ್ರಭಾ ಮಲ್ಲಿಕಾರ್ಜನ್ ಅವರು 30.61 ಕೋಟಿ ರೂ. ಮೌಲ್ಯದ ವಸತಿ ಕಟ್ಟಡಗಳನ್ನು ಹೊಂದಿದ್ದಾರೆ.

# ವರದಿ ತಳ್ಳಿ ಹಾಕಿದ ಕೇಂದ್ರ

(3ನೇ ಪುಟದಿಂದ) ಇವುಗಳು ಜಮೀನು ವಿವಾದ, ಕೌಟುಂಬಿಕ ವಿವಾದ, ಕೊರೊನಾ ಶಿಷ್ಟಾಚಾರ ಉಲ್ಲಂಘನೆ ಮತ್ತಿತರೆ ಸಣ್ಣ ಪುಟ್ಟ ವಿಷಯಗಳಿಗೆ ಸಂಬಂಧಿಸಿದವು. ಉಳಿದ 155 ಪ್ರಕರಣಗಳು ಸಂಜ್ಞೇಯೇತರ ಪ್ರಕರಣಗಳು. ಒಟ್ಟಾರೆ 8 ರಾಜ್ಯಗಳಲ್ಲಿ ಈ ಪ್ರಕರಣಗಳಿಗೆ ಸಂಬಂಧಿಸಿದಂತೆ 334 ಜನರನ್ನು ಬಂಧಿಸಲಾಗಿದೆ ಎಂದು ಮೆಹ್ತಾ ತಿಳಿಸಿದ್ದಾರೆ.

ಅಸೋಸಿಯೇಷನ್ ಫಾರ್ ಪ್ರೊಟೆಕ್ಷನ್ ಆಫ್ ಸಿವಿಲ್ ರೈಟ್ಸ್ ಸಂಸ್ಥೆ ಮತ್ತಿತರರು ಸತ್ಯಶೋಧನಾ ವರದಿ ಎಂದು ಹೇಳಿಕೊಳ್ಳುವ ವರದಿ ನೀಡಿದ್ದಾರೆ. ಇದರಲ್ಲಿನ ಬಹುತೇಕ ಘಟನೆಗಳನ್ನು ತಪ್ಪಾಗಿ ಬಿಂಬಿಸಲಾಗಿದೆ ಇಲ್ಲವೇ ಉದ್ದೇಶಪೂರ್ವಕವಾಗಿ ವೈಭವೀಕರಿಸಲಾಗಿದೆ ಎಂದೂ ಕೇಂದ್ರ ಸರ್ಕಾರ ತಿಳಿಸಿದೆ.

# 56.75 ಲಕ್ಷ ರೂ. ಮೌಲ್ಯದ ಮದ್ಯ ವಶ

ದಾವಣಗೆರೆ, ಏ.13- ಅಕ್ರಮವಾಗಿ ಸಾಗಿಸುತ್ತಿದ್ದ 56.75 ಲಕ್ಷ ರೂ. ಮೌಲ್ಯದ 4823.640 ಲೀಟರ್ (550 ಪೆಟ್ಟಿಗೆ) ಮದ್ಯವನ್ನು ಅಬಕಾರಿ ಇಲಾಖೆ ಅಧಿಕಾರಿಗಳು ವಶ ಪಡಿಸಿಕೊಂಡಿದ್ದಾರೆ.

ಬುಧವಾರ ಬೆಳಿಗ್ಗೆ ಮೆ. ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್ ಕುಂಬಳಗೋಡು ಗ್ರಾಮದ, ಬೆಂಗಳೂರು ಈ ಡಿಸ್ಟಿಲರಿಯಿಂದ ಅಶೋಕ್ ಲೇಲ್ಯಾಂಡ್ ಟ್ರಕ್ ವಾಹನದ ಮೂಲಕ ಸಾಗಾಣಿಕೆಯಾದ ಮದ್ಯದ ಪೆಟ್ಟಿಗೆಯಲ್ಲಿ ಅಬಕಾರಿ ಭದ್ರತಾ ಚೀಟಿ ನಮೂದಾಗದೇ, ಈ ಪೆಟ್ಟಿಗೆಗಳು ಸ್ಕ್ಯಾನ್ ಆಗದ ಕಾರಣ ಅಬಕಾರಿ ಕಾಯ್ದೆ ಉಲ್ಲಂಘನೆಯಾಗಿರುತ್ತದೆ.

ಈ ಹಿನ್ನೆಲೆಯಲ್ಲಿ 550 ಪೆಟ್ಟಿಗೆಯಲ್ಲಿರುವ 4823. 640 ಲೀಟರ್ ಮದ್ಯ ಹಾಗೂ 21 ಲಕ್ಷ ರೂ. ಮೌಲ್ಯದ ಅಶೋಕ್ ಲೇ ಲ್ಯಾಂಡ್ ಟ್ರಕ್ ಅನ್ನು ವಶಪಡಿಸಿಕೊಂಡಿದ್ದಾರೆ.

## ನಗರದಲ್ಲಿ ಇಂದು ಅಂಬೇಡ್ಕರ್ ಜಯಂತಿ, ಪ್ರಣಾಳಿಕೆ ಬಿಡುಗಡೆ

ಸ್ಲಂ ಜನಾಂದೋಲನ ಕರ್ನಾಟಕ ಹಾಗೂ ಸಾವಿತ್ರಿ ಬಾಯಿಪುಲೆ ಮಹಿಳಾ ಸಂಘಟನೆ, ಜಿಲ್ಲಾ ಸಮಿತಿ ವತಿಯಿಂದ ರೋಟರಿ ಬಾಲಭವನದಲ್ಲಿ ಇಂದು ಬೆಳಿಗ್ಗೆ 11ಕ್ಕೆ ಡಾ.ಬಿ.ಆರ್.ಅಂಬೇಡ್ಕರ್ ಅವರ 132ನೇ ಜಯಂತಿ, ಸ್ಲಂ ಜನರ ಪ್ರಣಾಳಿಕೆ-2023 ಬಿಡುಗಡೆ ಕಾರ್ಯಕ್ರಮ ನಡೆಯಲಿದೆ.

ಹಿರಿಯ ವಕೀಲರಾದ ಬಿ.ಎಂ.ಹನುಮಂತಪ್ಪ, ಎಲ್.ಹೆಚ್.ಅರುಣ್‌ಕುಮಾರ್, ಸ್ಲಂ ಜನಾಂದೋಲನ ಕರ್ನಾಟಕದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಜಿ.ಹೆಚ್. ರೇಣುಕಾ ಯಲ್ಲಮ್ಮ, ಎಸ್‌ಜೆಕೆ ಗೌರವಾಧ್ಯಕ್ಷ ಎಂ. ಶಬ್ಬೀರ್ ಸಾಬ್, ಮಹಿಳಾ ಅಧ್ಯಕ್ಷೆ ಮಂಜುಳ, ಖಜಾಂಚಿ ಬಾಲಪ್ಪ ಮುಖ್ಯ ಅತಿಥಿಗಳಾಗಿ ಆಗಮಿಸುವರು.

# ಹರಪನಹಳ್ಳಿ ಕೆಆರ್‌ಎಸ್ ಅಭ್ಯರ್ಥಿ ಈಡಿಗರ ಕರಿಬಸಪ್ಪ ನಾಮಪತ್ರ ಸಲ್ಲಿಕೆ



ಹರಪನಹಳ್ಳಿ, ಏ.13- ವಿಧಾನಸಭಾ ಚುನಾವಣೆಗೆ ನಾಮಪತ್ರ ಸಲ್ಲಿಸುವ ಕಾರ್ಯ ಆರಂಭವಾದ ಮೊದಲ ದಿನ ಗುರುವಾರ ಒಂದು ನಾಮಪತ್ರ ಸಲ್ಲಿಕೆಯಾಗಿದೆ.

ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ (ಕೆಆರ್‌ಎಸ್) ಅಭ್ಯರ್ಥಿಯಾಗಿ ತಾಲ್ಲೂಕಿನ ನೀಲಗುಂದ ಗ್ರಾಮದ ಈಡಿಗರ ಕರಿಬಸಪ್ಪ ನಾಮಪತ್ರ ಸಲ್ಲಿಸಿದರು ಎಂದು ಚುನಾವಣಾಧಿಕಾರಿ ಟಿ.ವಿ. ಪ್ರಕಾಶ್ ತಿಳಿಸಿದ್ದಾರೆ.

# ನಗರದಲ್ಲಿ ಇಂದಿನಿಂದ ಮಕ್ಕಳಿಗೆ ಉಚಿತ ವ್ಯಕ್ತಿತ್ವ ವಿಕಸನ ಶಿಬಿರ

ಅಂತರ ರಾಷ್ಟ್ರೀಯ ಅಧ್ಯಾತ್ಮಿಕ ಸೇವಾ ಸಂಸ್ಥೆ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ವತಿಯಿಂದ ಉಚಿತ ವ್ಯಕ್ತಿತ್ವ ವಿಕಸನ ಶಿಬಿರವನ್ನು ಇಂದಿನಿಂದ ಇದೇ ದಿನಾಂಕ 20ರವರೆಗೆ ಹಮ್ಮಿಕೊಳ್ಳಲಾಗಿದೆ.

ನಗರದ ಶ್ರೀ ಡಿ. ದೇವರಾಜ ಅರಸು ಬಡಾವಣೆ 'ಬಿ' ಬ್ಲಾಕ್‌ನಲ್ಲಿರುವ ಶಿವ ಧ್ಯಾನ ಮಂದಿರದಲ್ಲಿ ಏರ್ಪಾಡಾಗಿರುವ ಈ ಶಿಬಿರದಲ್ಲಿ 7ನೇ ತರಗತಿಯಿಂದ ಪಿಯುಸಿವರೆಗೆ ವಿದ್ಯಾಭ್ಯಾಸ ಮಾಡುತ್ತಿರುವ ಮಕ್ಕಳು ಭಾಗವಹಿಸಬಹುದು ಎಂದು ಸಂಸ್ಥೆಯ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಲೀಲಾಜಿ ತಿಳಿಸಿದ್ದಾರೆ.

ಶಿಬಿರವು ಪ್ರತಿದಿನ ಬೆಳಿಗ್ಗೆ 10 ರಿಂದ ಸಂಜೆ 5ರವರೆಗೆ ನಡೆಯಲಿದ್ದು, ಶಿಬಿರಾರ್ಥಿಗಳಿಗೆ ಉಚಿತ ನೋಟ್ ಬುಕ್, ಪೆನ್ ನೀಡಲಾಗುತ್ತದೆ. ಆಸಕ್ತರು ದೂರವಾಣಿ 08192- 2555575ಕ್ಕೆ ಸಂಪರ್ಕಿಸಿ ಹೆಸರು ನೋಂದಾಯಿಸಬಹುದು.

# ಅಮುಲ್ ವಿರುದ್ಧ ಕರವೇ ಪ್ರತಿಭಟನೆ, ಸಾರ್ವಜನಿಕರಿಗೆ ಹಾಲು, ಮಜ್ಜಿಗೆ ವಿತರಣೆ




ದಾವಣಗೆರೆ, ಏ. 13- ಅಮುಲ್ ಹಾಲು ಉತ್ಪನ್ನ ಸಂಸ್ಥೆಯಲ್ಲಿ 'ನಂದಿನಿ" ಸಂಸ್ಥೆಯನ್ನು ವಿಲೀನಗೊಳಿಸುವ ಕ್ರಮವನ್ನು ಖಂಡಿಸಿ ಕರ್ನಾಟಕ ರಕ್ಷಣಾ ವೇದಿಕೆ ಸಾರ್ವಜನಿಕರಿಗೆ ನಂದಿನಿ ಹಾಲು ಮತ್ತು ಮಜ್ಜಿಗೆ ವಿತರಣೆ ಮಾಡುವ ಮೂಲಕ ವಿನೂತನ ರೀತಿಯಲ್ಲಿ ಪ್ರತಿಭಟನೆ ಮಾಡಿ, ಮುಖ್ಯಮಂತ್ರಿಗಳಿಗೆ ಉಪ ವಿಭಾಗಾಧಿಕಾರಿಗಳ ಮೂಲಕ ಮನವಿ ಸಲ್ಲಿಸಿದರು.

ಪ್ರತಿಭಟನೆಯ ನೇತೃತ್ವ ವಹಿಸಿದ್ದ ವೇದಿಕೆ ಜಿಲ್ಲಾಧ್ಯಕ್ಷ ಎಂ.ಎಸ್. ರಾಮೇಗೌಡ ಮಾತನಾಡಿ, ಕೆಎಂಎಫ್ ಉತ್ಪನ್ನಗಳನ್ನು ಖರೀದಿಸಿ ಕರ್ನಾಟಕದ ರೈತರ ಬದುಕನ್ನು ಹಸನುಗೊಳಿಸುವಂತೆ ಅವರು ಮನವಿ ಮಾಡಿದರು.

ರೈತರ ಬೆನ್ನೆಲುಬಾಗಿರುವ ಕೆಎಂಎಫ್ (ನಂದಿನಿ) ಸಂಸ್ಥೆಯನ್ನು ಮುಚ್ಚುವ ಹುನ್ನಾರ ನಡೆಸಿದ್ದು, ಗುಜರಾತ್‌ನ ಅಮುಲ್ ಸಂಸ್ಥೆಯನ್ನು ಅಕ್ರಮವಾಗಿ ಕರ್ನಾಟಕದೊಳಗೆ ತರಲಾಗುತ್ತಿದೆ. ಅಮೂಲ್ ಮತ್ತು ನಂದಿನಿ ಸಂಸ್ಥೆಗಳನ್ನು ವಿಲೀನಗೊಳಿಸುವುದಾಗಿ ಕೇಂದ್ರ ಗೃಹ ಸಚಿವ ಅಮಿತ್ ಷಾ ಮಂಡ್ಯದ ಕಾರ್ಯಕ್ರಮದಲ್ಲಿ ಘೋಷಿಸಿದ್ದರು. ಅಮುಲ್ ಸಂಸ್ಥೆ ತನ್ನ ಉತ್ಪನ್ನಗಳನ್ನು ಕರ್ನಾಟಕದಲ್ಲಿ ಮಾರಾಟ ಮಾಡುವುದಾಗಿ ಘೋಷಿಸಿದೆ. ಒಂದು ವೇಳೆ ಅಮುಲ್ ತೆಕ್ಕೆಗೆ ನಂದಿನಿ ಹೋದರೆ ರಾಜ್ಯದ ಲಕ್ಷಾಂತರ ರೈತರು ಬೀದಿಪಾ ಲಾಗುತ್ತಾರೆ ಎಂದು ಹೇಳಿದರು. ಕನ್ನಡಿಗರು ಕಟ್ಟಿ ಬೆಳೆಸಿದ ಬ್ಯಾಂಕುಗಳನ್ನು ವಿಲೀನಗೊಳಿಸಿದ್ದಾಯಿತು. ಇದೀಗ ನಂದಿನಿ ಹಾಲು ಉತ್ಪನ್ನ ಸಂಸ್ಥೆಯನ್ನು ವಿಲೀನಗೊಳಿಸಲು ಮುಂದಾಗಿರುವುದು ಖಂಡನೀಯ ಎಂದರು.

ಕರವೇ ನಾರಾಯಣಗೌಡರ ಬಣ ಈಗಾಗಲೇ ಅಮುಲ್ ವಿರುದ್ಧ ಚಳವಳಿ ಆರಂಭಿಸಿದೆ. ಇ-ಕಾಮರ್ಸ್ ಸಂಸ್ಥೆಗಳ ಮೂಲಕ ಅಮುಲ್ ಹಾಲು , ಮೊಸರು ಮಾರಾಟಕ್ಕೆ ಮುಂದಾದರೆ ಅಂತಹ ಸಂಸ್ಥೆಗಳ ವಿರುದ್ಧ ಹೋರಾಟ ನಡೆಸುವುದಾಗಿ ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಕರವೇ ಪದಾಧಿಕಾರಿಗಳಾದ ಎನ್.ಟಿ.ಹನುಮಂತಪ್ಪ, ಜಿ.ಎಸ್. ಸಂತೋಷ್, ಡಿ. ಗಜೇಂದ್ರ, ಶಾಂತಮ್ಮ, ಮಂಜುಳಾ ಮಹಾಂತೇಶ್, ಜಬೀವುಲ್ಲಾ, ಆಟೋ ರಫೀಕ್, ಸುರೇಶ್, ರಾಘವೇಂದ್ರ, ಧೀರೇಂದ್ರ, ಚಂದ್ರಶೇಖರ್, ಪಿ. ರಾಘವೇಂದ್ರ, ಕರಬಸಪ್ಪ, ಅಯೂಬ್, ಮಂಜುನಾಥ್, ತುಳಸಿರಾಮ್, ಬಸರಾಜ್ ಮತ್ತಿತರರಿದ್ದರು.

# ಕನ್ನಡ ಪ್ರವೇಶ, ಕನ್ನಡ ಕಾವ, ಕನ್ನಡ ಜಾಣ, ಕನ್ನಡ ರತ್ನ ಪರೀಕ್ಷೆಗಳಲ್ಲಿ ಜಿಲ್ಲೆಗೆ ಮೊದಲ ನಾಲ್ಕು ರ್‍ಯಾಂಕ್

ದಾವಣಗೆರೆ, ಏ.13- ಕನ್ನಡ ಸಾಹಿತ್ಯ ಪರಿಷತ್ ಕನ್ನಡ ಭಾಷೆ, ಸಾಹಿತ್ಯ, ಕಲೆ, ಸಂಸ್ಕೃತಿ ಮತ್ತು ಜಾನಪದ ಇವುಗಳ ರಕ್ಷಣೆ, ಪ್ರಸಾರ ಮತ್ತು ಅಭಿವೃದ್ಧಿಯ ಮೂಲ ಧ್ಯೇಯೋದ್ದೇಶಗಳ ಜೊತೆಗೆ ಕನ್ನಡ, ಕನ್ನಡಿಗ, ಕರ್ನಾಟಕದ ಹಿತರಕ್ಷಣೆಯ ಜವಾಬ್ದಾರಿಯನ್ನು ಹೊಂದಿ ಅನುಷ್ಠಾನಗೊಳಿಸಲು ಶ್ರಮಿಸುತ್ತಿದೆ.

ಈ ಹಿನ್ನೆಲೆಯಲ್ಲಿ ಪ್ರತಿ ವರ್ಷವೂ ಕನ್ನಡ ಸಾಹಿತ್ಯ ಪರಿಷತ್ ನಡೆಸುವ ಕನ್ನಡ ಪ್ರವೇಶ, ಕಾವ, ಜಾಣ, ರತ್ನ ಹಾಗೂ ಶಾಸನಶಾಸ್ತ್ರ ಡಿಪ್ಲೋಮಾ ಪರೀಕ್ಷೆಗಳನ್ನು ರಾಜ್ಯದಾದ್ಯಂತ ಆಯ್ದ ಸ್ಥಳಗಳಲ್ಲಿ ನಡೆಸುತ್ತಾ ಬಂದಿದೆ.

ಈ ಪರೀಕ್ಷೆಗಳಲ್ಲಿ ಮೊದಲ ಮೂರು ರ್‍ಯಾಂಕ್ ಪಡೆದ ವಿದ್ಯಾರ್ಥಿಗಳನ್ನು ಪುರಸ್ಕರಿಸುವ ನಿಟ್ಟಿನಲ್ಲಿ ನಗದು ಬಹುಮಾನದ ಜೊತೆಗೆ ಪ್ರಶಸ್ತಿ ಪತ್ರವನ್ನು ನೀಡಿ ಗೌರವಿಸಲಾಗುತ್ತಿದೆ.

2021-22 ನೇ ಸಾಲಿನಲ್ಲಿ ನಡೆಸಲಾದ ಈ ಮೇಲಿನ ಪರೀಕ್ಷೆಗಳಲ್ಲಿ 'ಕನ್ನಡ ಪ್ರವೇಶ' ಪರೀಕ್ಷೆಯಲ್ಲಿ ದಾವಣಗೆರೆ ಜಿಲ್ಲೆಯ ಸತ್ಯ ಶಿವಾನಿ, ಮನುಶ್ರೀ ಜಿ.ಜೆ., ಅಶ್ವಿನಿ ಅವರು ಕ್ರಮವಾಗಿ ಮೊದಲ ಮೂರು ರ್‍ಯಾಂಕ್‌ಗಳನ್ನು ಹಾಗೂ 2022-23 ನೇ ಸಾಲಿನಲ್ಲಿ ಇಂಧುಶ್ರೀ ಮೊದಲ ರ್‍ಯಾಂಕ್ ಪಡೆದಿದ್ದಾರೆ.

ಈ ಪ್ರತಿಭಾನ್ವಿತರಿಗೆ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಇದೇ ದಿನಾಂಕ 16ರ ಭಾನುವಾರ ಬೆಳಿಗ್ಗೆ 11 ಗಂಟೆಗೆ ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್‌ನ ಶ್ರೀ ಕೃಷ್ಣರಾಜ ಪರಿಷತ್ತಿನ ಮಂದಿರದಲ್ಲಿ ಹಮ್ಮಿಕೊಂಡಿದ್ದು, ಈ ಸಮಾರಂಭದಲ್ಲಿ ಪ್ರತಿಭಾನ್ವಿತರಿಗೆ ನಗದು ಬಹುಮಾನದೊಂದಿಗೆ ಪ್ರಶಸ್ತಿ ಪತ್ರ ನೀಡಿ ಪುರಸ್ಕರಿಸಲಾಗುವುದು.

ಈ ನಾಲ್ಕು ಜನ ಪ್ರತಿಭಾನ್ವಿತ ವಿದ್ಯಾರ್ಥಿನಿಗಳನ್ನು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ. ವಾಮದೇವಪ್ಪ ಅವರು ಅಭಿನಂದಿಸಿದ್ದಾರೆ.

# ಎಸ್ಸೆಸ್ಸೆಂ ಸೇರಿ ನಾಲ್ಕು ನಾಮಪತ್ರ ಸಲ್ಲಿಕೆ

(3ನೇ ಪುಟದಿಂದ) ಮೂಲಕ ಆಗಮಿಸಿ ನಾಮಪತ್ರ ಸಲ್ಲಿಸುತ್ತೇನೆ. ಅಂದು ದಕ್ಷಿಣ ಕ್ಷೇತ್ರದ ಅಭ್ಯರ್ಥಿಗಳೂ, ತಂದೆಯವರೂ ಆದ ಶಿವಶಂಕರಪ್ಪ ಅವರು ನಾಮಪತ್ರ ಸಲ್ಲಿಸಲಿದ್ದಾರೆ ಎಂದು ಎಸ್ಸೆಸ್ಸೆಂ ಹೇಳಿದರು.

**ಭಾರತಿ ನಾಮಪತ್ರ:** ಸೋಷಿಯಲಿಸ್ಟ್ ಯುನಿಟಿ ಸೆಂಟರ್ ಆಫ್ ಇಂಡಿಯಾ (ಕಮ್ಯುನಿಸ್ಟ್) ಪಕ್ಷದ ದಾವಣಗೆರೆ ದಕ್ಷಿಣ ಕ್ಷೇತ್ರದ ಅಭ್ಯರ್ಥಿ ಭಾರತಿ ಕೆ. ಗುರುವಾರ ನಾಮಪತ್ರ ಸಲ್ಲಿಸಿದರು. ಅಪರ್ಣಾ ಬಿ.ಆರ್., ಮಂಜುನಾಥ ಕೈದಾಳೆ, ಮಂಜುನಾಥ ಕುಕ್ಕವಾಡ, ಮಧು ತೊಗಲೇರಿ ಇದ್ದರು.


**D.R.R. ENGLISH MEDIUM NURSERY, PRIMARY AND HIGH SCHOOL**
P.B. Road, DAVANGERE

**WANTED**

Qualified, Trained, Experienced Teachers with fluency in English

| Sl. No. | Subject | Qualification | No. of Posts |
|---|---|---|---|
| 1 | Science | M.Sc/B.Sc/B.Ed- CBZ | 01 |
| 2 | Mathematics | M.Sc/B.Sc/B.Ed- PCM | 01 |
| 3 | English/Social Science | M.A/B.A/B.Ed | 01 |
| 4 | English | M.A/B.A/B.Ed | 01 |
| 5 | Physical Education | B.P.Ed | 01 |
| 6 | Nursery Teaching | NTC/PUC, D.Ed | 01 |
| 7 | Hindi | M.A/B.A/B.Ed | 01 |

Send Your Resume to " Administrative Officer"
D.R.R. School, P.B. Road, Opp : Central Ware House, Davanagere -577003.
Mob : 9845447268, 9591921121, 9972423832
Interview Date 29/04/2023 (10.00 am) Saturday
(Note : Admissions are Open for E/M Nursery /Primary & High School
-Schools Management



**ಮಾನ್ಯ ನಾಲ್ಕನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ದಾವಣಗೆರೆ.**

**ಅಸಲು ದಾವಾ ನಂ. 580/2015**

ವಾದಿಯರು : 1) ಜಿ.ವಿ. ಪ್ರಸಾದ್ ಬಿನ್ ಲೇಟ್ ವಿರುಪಾಕ್ಷಪ್ಪ, ವಯಸ್ಸು 40 ವರ್ಷ, ಗುಡಾಳ್ ಗ್ರಾಮ, ದಾವಣಗೆರೆ ತಾಲ್ಲೂಕು. 2) ಶಾರದಮ್ಮ ಕೋಂ ವಿರುಪಾಕ್ಷಪ್ಪ, ವಯಸ್ಸು 60 ವರ್ಷ, ಗುಡಾಳ್ ಗ್ರಾಮ, ದಾವಣಗೆರೆ ತಾಲ್ಲೂಕು. - ವಿರುದ್ಧ-

ಪ್ರತಿವಾದಿಯರು : 1) ಶೇಖರಪ್ಪ ಬಿನ್ ಪಂಪಣ್ಣ, ವಯಸ್ಸು 65 ವರ್ಷ (ಪೌತಿ), 1ಎ) ರತ್ನಮ್ಮ ಕೋಂ ಲೇಟ್ ಶೇಖರಪ್ಪ ವಯಸ್ಸು 55 ವರ್ಷ, ಗುಡಾಳ್ ಗ್ರಾಮ, ದಾವಣಗೆರೆ ತಾಲ್ಲೂಕು. 1ಬಿ) ಶ್ವೇತ ಕೋಂ ಕೊಟ್ರೇಶಪ್ಪ ವಯಸ್ಸು 50 ವರ್ಷ, ಗುಡಾಳ್ ಗ್ರಾಮ, ದಾವಣಗೆರೆ ತಾಲ್ಲೂಕು.

**ಸಿಪಿಸಿ. ಆದೇಶ 5 ನಿಯಮ 20ರ ಅಡಿಯಲ್ಲಿ ಪ್ರತಿವಾದಿಯವರ ವಿರುದ್ಧ ನೀಡಲಾದ ಪ್ರಕಟಣಾ ನೋಟೀಸ್**

ಮೇಲ್ಕಂಡ ದಾವೆಯನ್ನು ವಾದಿಯು ಪ್ರತಿವಾದಿಯರ ವಿರುದ್ಧ ಘೋಷಣಾತ್ಮಕ ಹಾಗೂ ಇತರೆ ಪರಿಹಾರಗಳನ್ನು ಕೋರಿ ಮಾನ್ಯ ಘನ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತಾರೆ. ಸದರಿ ಪ್ರಕರಣದಲ್ಲಿ ನೀವು ಪ್ರತಿವಾದಿ ಒಂದನೇಯವರಾದ ಶೇಖರಪ್ಪ ಬಿನ್ ಪಂಪಣ್ಣ ಇವರ ವಾರಸುದಾರರಾಗಿರುತ್ತೀರಿ, ನ್ಯಾಯಾಲಯವು ನಿಮ್ಮ ವಿರುದ್ಧ ನ್ಯಾಯಾಲಯದಿಂದ ಸಮನ್ಸನ್ನು ಈಗೆಷ್ಟೋ ಬಾರಿ ನೋಂದಾಯಿತ ಅಂಚೆಯ ಮೂಲಕ ಕಳುಹಿಸಿದ್ದರೂ ಸಹಾ ಅವು ನಿಮಗೆ ಜಾರಿಯಾಗಿರುವುದಿಲ್ಲ. ಕಾರಣ ನಿಮ್ಮ ಹಾಜರಾತಿಗಾಗಿ ದಿನಾಂಕ : 22.05.2023 ರಂದು ಬೆಳಿಗ್ಗೆ 11.00 ಗಂಟೆಗೆ ಮುದ್ದತ್ತು ನಿಗದಿಯಾಗಿದ್ದು, ಆ ದಿನ ನೀವು ಖುದ್ದಾಗಿಯಾಗಲೀ ಅಥವಾ ವಕೀಲರ ಮುಖಾಂತರವಾಗಲೀ ಪ್ರಕರಣದಲ್ಲಿ ಹಾಜರಿದ್ದು, ತಕರಾರು ಇದ್ದಲ್ಲಿ ಸಲ್ಲಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮ ವಿರುದ್ಧ ಏಕಪಕ್ಷೀಯ ತೀರ್ಮಾನ ತೆಗೆದುಕೊಳ್ಳಲಾಗುವುದು ತಿಳಿಯಿರಿ. ನ್ಯಾಯಾಲಯದ ಮೊಹರು ಹಾಗೂ ಸಹಿಯೊಂದಿಗೆ, ದಿನಾಂಕ : 01.04.2023 ರಂದು ಕೊಟಲ್ಪಟ್ಟಿದೆ.

ಸಹಿ/- ವಾದಿಯ ಪರ ವಕೀಲರು (ಎನ್. ರಾಮದಾಸ್), ದಾವಣಗೆರೆ.

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೇದಾರರು, ಮಾನ್ಯ ನಾಲ್ಕನೇ ಹೆಚ್ಚುವರಿ ನ್ಯಾಯಾಧೀಶರವರ ನ್ಯಾಯಾಲಯ ದಾವಣಗೆರೆ.



**ಜಗಳೂರು ತಾಲ್ಲೂಕು ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ನಿ.,**

ಜಗಳೂರು, ದಾವಣಗೆರೆ ಜಿಲ್ಲೆ
ವಿಳಾಸ:ರಾಜೇಂದ್ರ ಪ್ರಸಾದ್ ರೋಡ್, ಜಗಳೂರು ಟೌನ್
ದಾವಣಗೆರೆ ಜಿಲ್ಲೆ-577528
ಫೋ. : 08196-227339, ಇ-ಮೇಲ್ : pcardbjlr@yahoo.com
JPCA&RB NO/ /2022-23 ದಿನಾಂಕ : 13-04-2023

**ಪತ್ರಿಕಾ ಪ್ರಕಟಣೆ**

ಮಾನ್ಯ ಸದಸ್ಯರಿಗೆ ತಿಳಿಯಪಡಿಸುವುದೇನೆಂದರೇ, ಮುಂಬರುವ ಬ್ಯಾಂಕಿನ ಆಡಳಿತ ಮಂಡಳಿ ಚುನಾವಣೆಗೆ ಮತದಾರರ ಪಟ್ಟಿಯನ್ನು ತಯಾರಿಸಲು ಅನರ್ಹ ಮತದಾರರಿಗೆ ಕ.ಸ.ಸಂ.ಕಾಯ್ದೆ 1959 ಹಾಗೂ ನಿಯಮಗಳು 1960 ರ ನಿಯಮ (13) 'ಡಿ' ಅನ್ವಯ ನೋಟಿಸನ್ನು ನೋಂದಾಯಿತ ಅಂಚೆ ಸ್ವೀಕೃತಿ ಮೂಲಕ ಈಗಾಗಲೇ ಕಳುಹಿಸಿದ್ದು. ನೋಟಿಸ್ ತಲುಪದೇ ಇರುವವರು ಇದೇ ನೋಟಿಸ್ ಎಂದು ಭಾವಿಸಿ ಬ್ಯಾಂಕಿಗೆ ಭೇಟಿ ನೀಡಿ ದಿನಾಂಕ: 30/04/2023 ರೊಳಗೆ ಅಗತ್ಯ ದಾಖಲೆಗಳೊಂದಿಗೆ ಸಂಪರ್ಕಿಸಲು ಕೋರಿದೆ. ತಪ್ಪಿದಲ್ಲಿ ನಿಮ್ಮ ಆಕ್ಷೇಪಣೆಗಳು ಏನೂ ಇಲ್ಲ ಎಂದು ಭಾವಿಸಿ ಮುಂದಿನ ಕ್ರಮವಿಡಲಾಗುವುದು ಎಂದು ತಿಳಿಯುವುದು.

ದಿನಾಂಕ: 13.04.2023

ಸಹಿ/- ವ್ಯವಸ್ಥಾಪಕರು
ಜಗಳೂರು

## ದೋಸೆಯಲ್ಲಿ ಅರಳಿದ ಮತದಾನ ಜಾಗೃತಿ



ದಾವಣಗೆರೆ, ಏ. 12- ಕಾದ ಹೆಂಚಿಗೆ ಎಣ್ಣೆ ಸವರಿ ಹಿಟ್ಟಿನಲ್ಲಿ 'ಮತದಾನ', 'ಓಟ್ ಮಾಡಿ', ಹೆಲ್ಪ್‌ಲೈನ್ ನಂಬರ್ '1950' , 'ವಿಹೆಚ್‌ಪಿ' ಆಪ್ ಗಳನ್ನು ಅಕ್ಷರದ ದೋಸೆ ಮೂಲಕ ಹಾಕಿದ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸುರೇಶ್ ಹಿಟ್ನಾಳ್ ನಗರದ ಹರಳೆಣ್ಣೆ ಕೊಟ್ರಬಸಪ್ಪ ವೃತ್ತದಲ್ಲಿ ಮತದಾನ ಜಾಗೃತಿ ಅಭಿಯಾನಕ್ಕೆ ಚಾಲನೆ ನೀಡಿದರು. ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್ ವತಿಯಿಂದ ಏರ್ಪಾಡಾಗಿದ್ದ ಈ ಅಭಿಯಾನದಲ್ಲಿ ಜಿ.ಪಂ. ಮುಖ್ಯ ಯೋಜನಾಧಿಕಾರಿ ಮಲ್ಲಾನಾಯ್ಕ, ಪಿಎಇಓ ಶಾರದ ದೊಡ್ಡನಗೌಡ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅಧಿಕಾರಿ ಮಲ್ಲಿಕಾರ್ಜುನ ಮಠದ್, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿ ಮಂಜಾನಾಯ್ಕ, ಡಯಟ್ ಪ್ರಾಚಾರ್ಯರಾದ ಶ್ರೀಮತಿ ಗೀತಾ ಮತ್ತಿತರರು ಉಪಸ್ಥಿತರಿದ್ದರು.

# ದೇಶದ ಸುಭದ್ರತೆಗಾಗಿ ಮತದಾನ ಮಾಡಿ : ಪ್ರಕಾಶ್ ಇಟ್ನಾಳ್

ದಾವಣಗೆರೆ, ಏ.13- ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಉತ್ತಮ ಸರ್ಕಾರ ಹಾಗೂ ಆಡಳಿತ ವ್ಯವಸ್ಥೆಯನ್ನು ಆಯ್ಕೆ ಮಾಡಿಕೊಳ್ಳುವ ಹಕ್ಕು ಮತದಾರರಿಗೆ ಇದೆ. ಆದ್ದರಿಂದ ಮತದಾನ ಅತ್ಯಂತ ಮಹತ್ವದ್ದಾಗಿದ್ದು, ದೇಶದ ಭವಿಷ್ಯ ಮತ್ತು ಸಮಗ್ರ ಬೆಳವಣಿಗೆಯಲ್ಲಿ ಮತದಾರರ ಪಾತ್ರ ಮುಖ್ಯವಾಗಿದೆ ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಪ್ರಕಾಶ್ ಇಟ್ನಾಳ್ ತಿಳಿಸಿದರು.

ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ಯುವ ಮತದಾರರಲ್ಲಿ ಮತದಾನದ ಜಾಗೃತಿ ಮೂಡಿಸುವ ಸ್ವೀಪ್ ಕಾರ್ಯಕ್ರಮದ ಪ್ರಯುಕ್ತ ನಿನ್ನೆ ಏರ್ಪಡಿಸಿದ್ದ ಜಾಗೃತಿ ಜಾಥಾಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಯುವ ಮತದಾರರೇ ಅರ್ಹ, ಸಮರ್ಥ ಮತ್ತು ಸುಭದ್ರ ಭಾರತ ನಿರ್ಮಾಣದ ಕ್ರಿಯಾಶೀಲ ಪ್ರತಿನಿಧಿಗಳನ್ನು ಆಯ್ಕೆ ಮಾಡುವ ನಿರ್ಣಾಯಕರು. ತಮ್ಮ ಮತವನ್ನು ಚಲಾಯಿಸಿ ಸಮರ್ಪಕ ಆಡಳಿತಕ್ಕೆ ಕಾರಣರಾಗಬೇಕು ಎಂದು ನುಡಿದರು.

ಪ್ರತಿಯೊಬ್ಬ ವಿದ್ಯಾರ್ಥಿಯೂ ಮತದಾನದ ಬಗ್ಗೆ ಅರಿತುಕೊಳ್ಳಬೇಕು. ತಾವಷ್ಟೇ ಅಲ್ಲದೆ ತಮ್ಮ ಕುಟುಂಬದ ಎಲ್ಲ ಅರ್ಹ ಮತದಾರರಿಗೂ ಮತದಾನದ ಮಹತ್ವವನ್ನು ತಿಳಿಸಬೇಕು. ಸಾಮಾಜಿಕವಾಗಿ ತಮ್ಮ ಕರ್ತವ್ಯವನ್ನು ನಿರ್ವಹಿಸಬೇಕು ಎಂದು ಸಲಹೆ ನೀಡಿದರು.



**ದಾವಣಗೆರೆ ವಿಶ್ವವಿದ್ಯಾಲಯದಲ್ಲಿ ಮತದಾರರ ಜಾಗೃತಿ ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯ್ತಿ ಸಿಇಒ**

ದಾವಣಗೆರೆ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಬಿ.ಡಿ.ಕುಂಬಾರ ಮಾತನಾಡಿ, ಪವಿತ್ರವಾದ ಮತದಾನವನ್ನು ಅರ್ಹ ವ್ಯಕ್ತಿಗಳಿಗೆ ಚಲಾಯಿಸುವ ಮೂಲಕ ವಿದ್ಯಾರ್ಥಿಗಳು ಸಂವಿಧಾನದತ್ತವಾದ ತಮ್ಮ ಹಕ್ಕನ್ನು ಅಧಿಕಾರಯುತವಾಗಿ, ನಿರ್ಭೀತಿ, ನಿರ್ಭಿಡೆಯಿಂದ ಚಲಾಯಿಸಬೇಕು. ತಮಗೆ ಬೇಕಾದ ಸರ್ಕಾರವನ್ನು ತಾವೇ ಆಯ್ಕೆ ಮಾಡಿಕೊಂಡು, ದೇಶದ ಉನ್ನತಿಗೆ ನೆರವಾಗಬೇಕು ಎಂದು ಸಲಹೆ ನೀಡಿದರು.

ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನ ಕುಟುಂಬಕ್ಕೆ ಮತದಾನ ಮಾಡಲು ಪ್ರೇರೇಪಿಸಬೇಕು. ಯಾವುದೇ ಆಮಿಷಗಳಿಗೆ ಗಮನ ನೀಡದೇ, ಮತಗಳನ್ನು ಹಣಕ್ಕೆ ಮಾರಿಕೊಳ್ಳದೇ ದೇಶದ ಉನ್ನತಿ ಗಮನದಲ್ಲಿ ಇಟ್ಟುಕೊಂಡು ಅರ್ಹರನ್ನು ಆಯ್ಕೆ ಮಾಡಿಕೊಳ್ಳಲು ವಿದ್ಯಾರ್ಥಿಗಳು ಗಮನ ನೀಡಬೇಕು ಎಂದು ತಿಳಿಸಿದರು.

ಕುಲಸಚಿವರಾದ ಬಿ.ಬಿ. ಸರೋಜ ಮಾತನಾಡಿ, ವಿದ್ಯಾರ್ಥಿಗಳಿಗೆ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗೆ ಮತದಾನ ಮಾಡುವ ಕುರಿತು ಪ್ರತಿಜ್ಞಾ ವಿಧಿ ಬೋಧಿಸಿ, ವಿದ್ಯಾರ್ಥಿಗಳು ಪ್ರಾಮಾಣಿಕವಾಗಿ ಜವಾಬ್ದಾರಿ ಅರಿತು ಮತದಾನದ ಕಾರ್ಯದಲ್ಲಿ ಪಾಲ್ಗೊಳ್ಳಬೇಕು ಎಂದರು.

ನಂತರ ವಿದ್ಯಾರ್ಥಿಗಳು ಮತದಾನ ಜಾಗೃತಿಯ ಪ್ರಯುಕ್ತ ಪ್ರಮುಖ ರಸ್ತೆಯಲ್ಲಿ ಜಾಥಾ ನಡೆಸಿ ನಂತರ ಮೈದಾನದಲ್ಲಿ ಮೇ 10ರಂದು ಮತದಾನ ಮಾಡಿ ಎಂದು ಅಕ್ಷರ ರೂಪದಲ್ಲಿ ನಿಂತು ಗಮನ ಸೆಳೆದರು.

ಕಾರ್ಯಕ್ರಮದಲ್ಲಿ ಪರೀಕ್ಷಾಂಗ ಕುಲಸಚಿವ ಡಾ.ಕೆ.ಶಿವಶಂಕರ್, ಪ್ರಾಧ್ಯಾಪಕರಾದ ಪ್ರೊ.ವೆಂಕಟರಾವ್ ಪಲಾಟಿ, ಡಾ. ವೆಂಕಟೇಶ, ಪ್ರೊ.ಶಿಶುಪಾಲ, ಪ್ರೊ.ವಿರೂಪಾಕ್ಷಯ್ಯ, ಡಾ.ನಂದೀಶ್ವರಪ್ಪ, ಪ್ರೊ.ಪ್ರಸನ್ನ ಕುಮಾರ, ಪ್ರೊ.ಪ್ರಕಾಶ, ಪ್ರೊ.ಮಹಾಬಳೇಶ್ವರ, ಪ್ರೊ.ರಾಮಲಿಂಗಪ್ಪ, ಡಾ.ಸೀಮಾ ಪಟೇಲ, ಡಾ.ಶಿವಲಿಂಗಪ್ಪ, ಡಾ.ಚಂದ್ರಕಾಂತ ನಾಯ್ಕೋಡಿ, ಡಾ.ಬಸವಣ್ಣ ಮತ್ತಿತರರಿದ್ದರು.

# ಆನಂದಪ್ಪ ಚಿತ್ತ ಜೆಡಿಎಸ್‌ನತ್ತ



ದಾವಣಗೆರೆ, ಏ.13- ಕಾಂಗ್ರೆಸ್ ಟಿಕೆಟ್ ಕೈತಪ್ಪಿದ ಹಿನ್ನೆಲೆಯಲ್ಲಿ ಮಾಯಕೊಂಡ ವಿಧಾನಸಭಾ ಕ್ಷೇತ್ರದ ಆಕಾಂಕ್ಷಿ ಎಚ್. ಆನಂದಪ್ಪ ಅವರು ತಮ್ಮ ನಿವಾಸದಲ್ಲಿ ಇಂದು ಬೆಂಬಲಿಗರ ಸಭೆ ಕರೆದು ಚರ್ಚಿಸಿದರು.

ಆನಂದಪ್ಪ ಮಾತನಾಡಿ, ಟಿಕೆಟ್ ಸಿಗದೇ ಇರುವುದು ನೋವು ತಂದಿದೆ. ಇದಕ್ಕಾಗಿ ಯಾರನ್ನೂ ದೂಷಿಸುವುದಿಲ್ಲ. ತಮ್ಮೆಲ್ಲರ ಸಲಹೆಯಂತೆ ಮುಂದು ವರೆಯುವೆ. ಜೆಡಿಎಸ್ ವರಿಷ್ಠ ಎಚ್.ಡಿ. ಕುಮಾರಸ್ವಾಮಿ ಅವರೊಂದಿಗೆ ಚರ್ಚಿಸಿರುವೆ ಎಂದು ತಿಳಿಸಿದರು.

ಪಕ್ಷಗಳ ಸ್ಥಳೀಯ ಮುಖಂಡರ ವಿರೋಧ ಕಟ್ಟಿಕೊಂಡು ಯಾವುದೇ ಪಕ್ಷದ ಟಿಕೆಟ್ ತಂದರೂ ಪ್ರಯೋಜನವಾಗದು. ಕ್ಷೇತ್ರದ ಅಭಿವೃದ್ಧಿ ಬಹಳ ಮುಖ್ಯ. ಮಾಯಕೊಂಡ ಕ್ಷೇತ್ರದಲ್ಲಿ ಎಸ್ಸಿ, ಲಿಂಗಾಯತರೂ ಸೇರಿ ಎಲ್ಲಾ ಜನಾಂಗದವರಿದ್ದಾರೆ. ಸಮಯಾಭಾವದಿಂದ ಎಲ್ಲರೂ ಒಗ್ಗಟ್ಟಾಗಿ ಕೆಲಸ ಮಾಡಬೇಕಿದೆ.

ಮುಖಂಡರು ಮಾತನಾಡಿ, ಕಾಂಗ್ರೆಸ್, ಬಿಜೆಪಿ ಜನ ವಿರೋಧಿಯಾಗಿವೆ. ಕಳೆದ ಎರಡು ಬಾರಿ ಚುನಾವಣೆಯಲ್ಲಿ ಅತ್ಯಧಿಕ ಮತ ಗಳಿಸಿ ಜನಮನದಲ್ಲಿ ನೆಲೆಗೊಂಡಿದ್ದಾರೆ. ಆನಂದಪ್ಪ ಅವರು ಜೆಡಿಎಸ್ ಸೇರಿದರೆ ಗೆಲುವು ಸುಲಭವಾಗುತ್ತದೆ. ಕುಮಾರಸ್ವಾಮಿ ರಾಜ್ಯದ ಅಭಿವೃದ್ಧಿಗೆ ಪಣ ತೊಟ್ಟಿದ್ದಾರೆ. ಮುಖ್ಯಮಂತ್ರಿಯಾಗಿ ಹಲವು ಅಭಿವೃದ್ಧಿ ಕೆಲಸ ಮಾಡಿದ್ದಾರೆ. ಅವರನ್ನು ಗೆಲ್ಲಿಸಲು ಹೋರಾಡೋಣ, ಜೆಡಿಎಸ್‌ಗೆ ಶಕ್ತಿ ತುಂಬೋಣ ಎಂದರು.

ಸಭೆಯಲ್ಲಿದ್ದ ಎಲ್ಲರೂ ಜೆಡಿಎಸ್ ಸೇರಲು ಒಕ್ಕೊರಲಿಂದ ಸಮ್ಮತಿಸಿದರು.

ಮುಖಂಡರಾದ ಕೃಷ್ಣಪ್ಪ ಗೊಲ್ಲರಹಳ್ಳಿ, ಉಮಾಕಾಂತ್, ಚಿರಡೋಣಿ ಮಂಜಣ್ಣ, ಹುಲಿಕಟ್ಟೆ ವೆಂಕಟೇಶ್, ಹೊನ್ನೂರು ಮಂಜಣ್ಣ, ಶ್ರೀನಿವಾಸ ಹೊನ್ನೂರು, ವೀರಣ್ಣ, ಕಂದಗಲ್ ನಾಗಣ್ಣ, ರೇವಣ್ಣ, ರಮೇಶ್, ಮಂಜಣ್ಣ, ಮಾಯಕೊಂಡದ ಗುಡ್ಡಿ ತಿಪ್ಪೇಸ್ವಾಮಿ, ಬಿ.ಸಿ. ಬಸವರಾಜಪ್ಪ, ಬಾಲರಾಜ್, ಪೋಸ್ಟ್ ಚಂದ್ರಪ್ಪ, ಗೋಪನಾಳ್ ಬಸವರಾಜ್, ದೇವರಾಜ ನಲ್ಕುಂದ ಮತ್ತಿತರರು ಇದ್ದರು.

# ಚರಿತ್ರೆ, ಪುರಾಣಗಳಲ್ಲಿ ಭಜನಾ ಪದಗಳ ಪಾತ್ರ ಹಿರಿದು

ಸಿರಿಗೆರೆ, ಏ. 13- ದೇವರು ಭಕ್ತಿ ಪ್ರಿಯ, ಹಾಗಾಗಿ ಎಲ್ಲರೂ ತಮ್ಮ ಹೃದಯಗಳಲ್ಲಿ ಭಕ್ತಿಯ ಮತ್ತು ಭಜನೆಗಳ ಮೂಲಕ ದೇವರನ್ನು ಆರಾಧಿಸಬೇಕು ಎಂದು ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು ಹೇಳಿದರು.

ಸಿರಿಗೆರೆಯ ಗುರುಶಾಂತೇಶ್ವರ ದಾಸೋಹ ಮಂಟಪದಲ್ಲಿ ಅಣ್ಣನ ಬಳಗದ ವತಿಯಿಂದ ಶ್ರೀ ಕಾಶಿ ಮಹಾಲಿಂಗ ಸ್ವಾಮೀಜಿಯರ 52 ನೇ ಶ್ರದ್ಧಾಂಜಲಿ ಪ್ರಯುಕ್ತ ಹಮ್ಮಿಕೊಂಡಿದ್ದ ರಾಜ್ಯಮಟ್ಟದ 34 ನೇ ಭಜನಾ ಮೇಳದ ಸಮಾರೋಪ ಸಮಾರಂಭದ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಈಗಾಗಲೇ ಸಾಮಾಜಿಕ ಜಾಲತಾಣದಲ್ಲಿ ಶಿವಶರಣರ ವಚನಗಳನ್ನು ಅಳವಡಿಸಲಾಗಿದ್ದು, ಇವುಗಳ ಜೊತೆಗೆ ಭಜನಾ ಪದಗಳನ್ನು ಸಹ ಅಳವಡಿಸುವ ಚಿಂತನೆ ನಡೆಸಲಾಗಿದೆ. ಜಾತ್ರೆ, ಗ್ರಾಮದ ವಿವಿಧ ಕಾರ್ಯಕ್ರಮಗಳಲ್ಲಿ, ಚರಿತ್ರೆ, ಪುರಾಣಗಳಲ್ಲಿ ಭಜನೆಗಳ ಪಾತ್ರ ಮುಖ್ಯವಾಗಿದೆ ಎಂದರು.

ಹಿರಿಯ ಸಾಹಿತಿ ಪ್ರೊ. ಹೆಚ್. ಲಿಂಗಪ್ಪ ಮಾತನಾಡಿ, ಶಿವಶರಣರು ಸಾಹಿತ್ಯ, ಸಂಸ್ಕೃತಿ, ಕಲೆಗಳ ಮೂಲಕ ಸಾಮಾಜಿಕ ಬದ್ಧತೆ, ವೈಜ್ಞಾನಿಕ ಮನೋಭಾವದ ಅರಿವನ್ನು ಮೂಡಿಸಿದರು. ಭಜನೆ ಅಪರೂಪದ ಕಲೆ. ಇದು ಸಾಧಕರ ಸ್ವತ್ತು. ಭಜನೆಗಳ ಮೂಲಕ ಹೇಳುವ ವಿಚಾರಗಳನ್ನು ಎಲ್ಲರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಸಂಸ್ಕೃತಿ ಮತ್ತು ಪರಂಪರೆಗಳನ್ನು ಜೀವಂತಗೊಳಿಸುವ ಶಕ್ತಿ ಭಜನೆಗೆ ಇದೆ ಎಂದು ಹೇಳಿದರು.

ದಾವಣಗೆರೆ ವಿವಿ ಸಹಾಯಕ ಪ್ರಾಧ್ಯಾಪಕ ಡಾ. ಭೀಮಾಶಂಕರ ಜೋಶಿ ಮಾತನಾಡಿ, ಮಾನವ ಜನ್ಮ ದೊಡ್ಡದು. ಮಾನವರು ಜ್ಞಾನ, ಕರ್ಮ, ಯೋಗ, ಭಕ್ತಿಯ ಮಾರ್ಗಗಳನ್ನು ಅನುಸರಿಸಬೇಕು. ದಾವಣಗೆರೆ ವಿವಿ ಸ್ಥಾಪನೆಗೆ ಡಾ. ಶಿವಮೂರ್ತಿ ಶ್ರೀಗಳು ಕಾರಣ ಎಂದರು.

ರಾಜ್ಯದ 78 ತಂಡಗಳು ಭಾಗವಹಿಸಿದ್ದು, ಕಿರಿಯರ ವಿಭಾಗದಲ್ಲಿ ಕಗತೂರು ವೀರಭದ್ರೇಶ್ವರ ಭಜನಾ ಮಂಡಳಿಯರು ಪ್ರಥಮ, ಉಚ್ಚಂಗಿ ದುರ್ಗದ ಕೆಳಗೋಟೆ ಆಂಜನೇಯ ಸ್ವಾಮಿ ತಂಡ ದ್ವಿತೀಯ, ಕಲಾವತಿ ಗುರುಶಾಂತೇಶ್ವರ ಭಜನಾ ಮಂಡಳಿಯವರು ತೃತೀಯ ಸ್ಥಾನ ಪಡೆದರು.

ಹಿರಿಯರ ವಿಭಾಗದಲ್ಲಿ ಕುರುಬಗೊಂಡದ ಮಲ್ಲಿಕಾರ್ಜುನ ಭಜನಾ ತಂಡ ಪ್ರಥಮ, ಮೈಸೂರು ಈಶ್ವರ ಭಜನಾ ತಂಡ ದ್ವಿತೀಯ, ಹೊಳಲು ಮೌನ ಬಸವೇಶ್ವರ ಭಜನಾ ತಂಡ ತೃತೀಯ ಬಹುಮಾನ ಪಡೆದುಕೊಂಡವು. ಸಿರಿಗೆರೆ ಸಂಸ್ಥೆ ಪ್ರಧಾನ ಕಾರ್ಯದರ್ಶಿ ಪ್ರೊ. ಎಸ್.ಬಿ. ರಂಗನಾಥ್, ಅಣ್ಣನ ಬಳಗದ ಅಧ್ಯಕ್ಷ ಬಿ.ಎಸ್. ಮರುಳಸಿದ್ಧಯ್ಯ, ತೀರ್ಪುಗಾರರು, ಭಜನಾ ಕಲಾವಿದರು, ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರು ಇದ್ದರು.

**ಸಿರಿಗೆರೆ ಭಜನಾ ಮೇಳದ ಸಮಾರೋಪ ಸಮಾರಂಭದಲ್ಲಿ ತರಳಬಾಳು ಜಗದ್ಗುರು**




# ಅರುಣಕುಮಾರ ಪೂಜಾರ್‌ಗೆ ಬಿಜೆಪಿ ಟಿಕೆಟ್



**ವರಿಷ್ಠರ ನೈತಿಕತೆ ಅನುಮಾನಿಸಿದ ಆಕಾಂಕ್ಷಿಗಳು**

ರಾಣೇಬೆನ್ನೂರು, ಏ. 13 - ಇಂದು ಪ್ರತ್ಯೇಕ ಸುದ್ದಿಗೋಷ್ಠಿ ಕರೆದಿದ್ದ ಬಿಜೆಪಿ ಟಿಕೆಟ್ ಆಕಾಂಕ್ಷಿಗಳಾಗಿದ್ದ ಮಾಜಿ ಸಚಿವ ಆರ್. ಶಂಕರ್ ಹಾಗೂ ವಾಯುವ್ಯ ರಸ್ತೆ ಸಾರಿಗೆ ನಿರ್ದೇಶಕ ಸಂತೋಷ ಪಾಟೀಲ ಅವರು, ಬಿಜೆಪಿ ಅಭ್ಯರ್ಥಿ ಅರುಣಕುಮಾರ ಪೂಜಾರ ಅವರು ಮಾಡಿದ ಪಕ್ಷ ದ್ರೋಹ, ಭ್ರಷ್ಟಾಚಾರ, ಸಮಾಜ ಘಾತುಕ ಕಾರ್ಯಗಳ ಬಗ್ಗೆ ಅತ್ಯಂತ ಕಠೋರವಾಗಿ ಪ್ರಸ್ತಾಪಿಸಿ ಪಕ್ಷದ ಮುಖಂಡರ ಕಾರ್ಯವೈಖರಿ ಬಗ್ಗೆ ಅನುಮಾನದ ಅಸಮಾಧಾನ ವ್ಯಕ್ತಪಡಿಸಿದರು.

ಮನೆಯಲ್ಲಿಯೇ ಕುಳಿತು ಓಸಿ ಮಟಕಾ ಬರೆಸುವುದು, ಕಳಪೆ ಕಾಮಗಾರಿ, ಎಲ್ಲ ಹಂತಗಳಲ್ಲೂ ಕಮೀಷನ್ ಭ್ರಷ್ಟಾಚಾರದ ಮೂಲಕ ಮೂರು ವರ್ಷ ಗಳಲ್ಲಿ ನೂರಾರು ಕೋಟಿ ಹಣ ಮಾಡಿದ ಶಾಸಕರು ಮತ್ತೆ ಮತ ಕೇಳಲು ಬರುತ್ತಿದ್ದಾರೆ, ಆದರೆ ಕ್ಷೇತ್ರದ ಜನತೆ ಅವರನ್ನು ಮತ್ತೆ ಇಟ್ಟಂಗಿ ಭಟ್ಟಿಗೆ ಕಳಿಸಲಿದ್ದಾರೆ ಎಂದು ಹೇಳಿದ ಶಂಕರ್, ಪ್ರಾಮಾಣಿಕವಾಗಿ ಜನಸೇವೆ ಮಾಡುವ ನನಗೆ ಎಲ್ಲ ಹಂತದಲ್ಲೂ ನೋವು ನೀಡಿ ಬಕೆಟ್ ಹಿಡಿದ ವರಿಗೆ ಟಿಕೆಟ್ ನೀಡಲಾಗಿದೆ ಎಂದು ವರಿಷ್ಠರ ನಡೆಯನ್ನು ಹಿಯಾಳಿಸಿದರು.

ನಾನು ಹಿಂದೆ ಮಾಡಿದ ತಪ್ಪುಗಳ ಬಗ್ಗೆ ಅರಿವಿದೆ. ಅದನ್ನು ಸರಿಪಡಿಸಿಕೊಂಡು ಕ್ಷೇತ್ರದ ಜನರ ಸೇವೆ ಮಾಡಿ ನನ್ನ ಕನಸಿನಂತೆ ಮಾದರಿ ಕ್ಷೇತ್ರ ಮಾಡಲು ಜನತೆ ನನಗೆ ಜಯ ತಂದುಕೊಡಲಿದ್ದಾರೆಂದರು.

ಸೈದ್ಧಾಂತಿಕ ನೆಲೆಗಟ್ಟಿನ ಮೇಲೆ ಪಕ್ಷವನ್ನು ಕಟ್ಟಲಾಗಿದ್ದು ಆ ಪಕ್ಷದ ಸಿದ್ಧಾಂತವನ್ನು ಸಂಪೂರ್ಣ ಹಾಳುಮಾಡಿ, ಸಂಘ ಪರಿವಾರದವರ ಮೇಲೆಯೆ ಕೇಸ್ ಹಾಕಿಸಿ ಪಕ್ಷ ವಿರೋಧಿ ನಿಲುವಿನ ಅರುಣಕುಮಾರ ಅವರಿಗೆ ಟಿಕೆಟ್ ಕೊಡದಂತೆ ಆಕಾಂಕ್ಷಿಗಳೆಲ್ಲರೂ ವರಿಷ್ಠರಿಗೆ ಮನವಿ ಮಾಡಿದ್ದರೂ ಸಹ ಮತ್ತೆ ಅವರಿಗೆ ಟಿಕೆಟ್ ನೀಡಿರುವುದು ನೇತಾರರ ನೈತಿಕತೆಯನ್ನು ಪ್ರಶ್ನಿಸುವಂತಾಗಿದೆ ಎಂದು ಸಾರಿಗೆ ಸಂಸ್ಥೆ ನಿರ್ದೇಶಕ ಸಂತೋಷ ಪಾಟೀಲ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಪಕ್ಷದ ಈ ನಡೆಯಿಂದ ಬೇಸರಗೊಂಡಿರುವ ಸಮಾರು 150 ಕ್ಕೂ ಹೆಚ್ಚು ಬಿಜೆಪಿಯ ವಿವಿಧ ಪದಾಧಿಕಾರಿಗಳು ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ಇಂದು ರಾಜೀನಾಮೆ ನೀಡಲಿದ್ದೇವೆ ಎಂದು ತಿಳಿಸಿದ ಸಂತೋಷ ಪಾಟೀಲ, ಕಳೆದ ಮೂರು ವರ್ಷಗಳಿಂದ ನವಯುಗ ಬಳಗದೊಂದಿಗೆ ತಾಲ್ಲೂಕಿನ ಜನರ ನೋವು-ನಲಿವುಗಳಿಗೆ ಸ್ಪಂದಿಸಿದ್ದೇನೆ. ಜಿ.ಪಂ. ಸದಸ್ಯನಾಗಿ ಆ ಭಾಗದ ಜನರ ಸೇವೆಯಲ್ಲಿ ಪ್ರೀತಿ ಗಳಿಸಿಕೊಂಡಿದ್ದೇನೆ. ನನ್ನ ಪ್ರಾಮಾಣಿಕ ಪ್ರಯತ್ನಕ್ಕೆ ಜನತೆ ಆಶೀರ್ವದಿಸಲಿದ್ದಾರೆ ಎನ್ನುವ ನಂಬಿಕೆ ವ್ಯಕ್ತಪಡಿಸಿದರು.

## ಅಸಾದ್ ಸಾವು

(3ನೇ ಪುಟದಿಂದ) ಅಹಮದ್ ಹಾಜರು ಪಡಿಸಿದ ದಿನವೇ ಎನ್ ಕೌಂಟರ್ ನಡೆದಿದೆ. 2005ರಲ್ಲಿ ಬಿ.ಎಸ್.ಪಿ. ಸಂಸದ ರಾಜು ಪಾಲ್ ಹಾಗೂ ಅವರಿಗೆ ಭದ್ರತೆ ನೀಡುತ್ತಿದ್ದ ಇಬ್ಬರು ಪೊಲೀಸರನ್ನು ಪ್ರಯಾಗ ರಾಜ್‌ನಲ್ಲಿ ಹತ್ಯೆಗೈಯ್ಯಲಾಗಿತ್ತು. ಈ ಪ್ರಕರಣದಲ್ಲಿ ಉಮೇಶ್ ಪಾಲ್ ಪ್ರಮುಖ ಸಾಕ್ಷಿಯಾಗಿದ್ದರು.

ಬೇಕಾಗಿದ್ದಾರೆ
ಆಫೀಸಿನಲ್ಲಿ ಕೆಲಸಕ್ಕೆ ಅಟೆಂಡರ್ಸ್ (ಹುಡುಗರು) ಬೇಕಾಗಿದ್ದಾರೆ.
ಊಟ, ವಸತಿ, ಸಂಬಳ ಕೊಡುತ್ತೇವೆ.
ಸ್ಥಳ : ಮೈಸೂರು (ವಿದ್ಯಾಸಂಸ್ಥೆಗೆ)
ವಯಸ್ಸು : 35 ವರ್ಷದ ಒಳಗಿನವರು ಮಾತ್ರ
ಕರೆ ಮಾಡಿ :
9964801496

# ಅಧ್ಯಕ್ಷ ಸ್ಥಾನಕ್ಕೆ ಎಲ್.ಹೆಚ್. ಅರುಣ್ ಸೇರಿ ನಾಲ್ವರು ಅಂತಿಮ ಕಣದಲ್ಲಿ

## 21ರಂದು ದಾವಣಗೆರೆ ವಕೀಲರ ಸಂಘದ ಚುನಾವಣೆ



ದಾವಣಗೆರೆ, ಏ.13- ಜಿಲ್ಲಾ ವಕೀಲರ ಸಂಘದ 2023-24 ಮತ್ತು 2024-25ನೇ ಸಾಲಿನ ದ್ವಿವಾರ್ಷಿಕ ಸಾಲಿನ ಚುನಾವಣೆಯು ಇದೇ ದಿನಾಂಕ 21 ರ ಶುಕ್ರವಾರ ಜರುಗಲಿದ್ದು, ಕಾರ್ಯಕಾರಿ ಸಮಿತಿಯ ಎಲ್ಲಾ 9 ಸ್ಥಾನಗಳಿಗೆ ಅವಿರೋಧ ಆಯ್ಕೆ ನಡೆದಿದೆ.

ಬಿ. ಅಜ್ಜಯ್ಯ, ಶ್ರೀಮತಿ ಆರ್. ಭಾಗ್ಯಲಕ್ಷ್ಮಿ, ಎಂ.ಚೌಡಪ್ಪ, ಟಿ.ಹೆಚ್. ಮಧುಸೂದನ್, ಎಲ್. ನಾಗರಾಜ್, ಕೆ.ಎಂ.ನೀಲಕಂಠಯ್ಯ, ಎಂ. ರಾಘವೇಂದ್ರ, ಜಿ.ಜೆ.ಸಂತೋಷ್ ಕುಮಾರ್ ಮತ್ತು ವಾಗೀಶ್ ಕಟಗಿಹಳ್ಳಿ ಮಠ ಅವರುಗಳು ಕಾರ್ಯಕಾರಿ ಸಮಿತಿಗೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಉಳಿದಂತೆ, ಅಧ್ಯಕ್ಷ ಸ್ಥಾನಕ್ಕೆ ನಾಲ್ವರು ಸ್ಪರ್ಧೆ ಮಾಡಿದ್ದು, ಎಲ್.ಹೆಚ್. ಅರುಣ್ ಕುಮಾರ್, ವಿ. ಗೋಪಾಲ, ಕೆ.ಎಂ. ಮಲ್ಲಿಕಾರ್ಜುನಪ್ಪ ಗುಮ್ಮನೂರು ಮತ್ತು ಪಂಚಪ್ಪ ಯಲ್ಲಪ್ಪ ಹಾದಿಮನಿ ಅಂತಿಮ ಕಣದಲ್ಲಿದ್ದಾರೆ.

ಉಪಾಧ್ಯಕ್ಷ ಸ್ಥಾನಕ್ಕೆ ಜಿ.ಕೆ. ಬಸವರಾಜ, ಟಿ. ದೇವಿಕುಮಾರ್ ಮತ್ತು ಎಸ್.ಹೆಚ್. ವಿನಯ್ ಕುಮಾರ್ ಸ್ಪರ್ಧಿಸಿದ್ದರೆ, ಎಸ್. ಬಸವರಾಜ್, ಪಿ. ಲಕ್ಕಪ್ಪ, ಎಸ್. ಮಂಜು ಕಾರ್ಯದರ್ಶಿ ಸ್ಥಾನಕ್ಕೆ ಸ್ಪರ್ಧಿಸಿದ್ದಾರೆ.

ಸಹ ಕಾರ್ಯದರ್ಶಿ ಸ್ಥಾನಕ್ಕೆ ಕೆ.ಬಿ. ಗಂಗಾಧರ ನಾಯ್ಕ, ಎಸ್. ಜಯಣ್ಣ, ಎ.ಎಸ್. ಮಂಜುನಾಥ, ಶ್ರೀರಾಮಕೃಷ್ಣ ಗೌಡ ಈಳಿಗೇರ ಮತ್ತು ವಿ. ವಸಂತ ಕುಮಾರ್ ಸ್ಪರ್ಧೆ ಮಾಡಿದ್ದಾರೆ.

ಉಮೇದುವಾರಿಕೆ ಅರ್ಜಿಯನ್ನು ಹಿಂದಕ್ಕೆ ಪಡೆಯಲು ಇಂದು ಕೊನೆಯ ದಿನವಾಗಿತ್ತು. ಇದೇ ದಿನಾಂಕ 21ರಂದು ಜಿಲ್ಲಾ ವಕೀಲರ ಸಂಘದ ಕಚೇರಿಯಲ್ಲಿ ಚುನಾವಣೆ ನಡೆಯಲಿದ್ದು, ಅದೇ ದಿನ ಸಂಜೆ ಫಲಿತಾಂಶ ಪ್ರಕಟವಾಗಲಿದೆ ಎಂದು ಹಿರಿಯ ನ್ಯಾಯವಾದಿಯೂ ಆಗಿರುವ ಚುನಾವಣಾಧಿಕಾರಿ ಎಲ್. ದಯಾನಂದ ತಿಳಿಸಿದ್ದಾರೆ.

## ನಗರದಲ್ಲಿ ಇಂದು ವೀರಭದ್ರಸ್ವಾಮಿ ಗುಗ್ಗಳ

ಶಾಮನೂರು ರಸ್ತೆಯಲ್ಲಿರುವ ಶ್ರೀ ಮಹಾಗಣಪತಿ ಮತ್ತು ಶ್ರೀ ವೀರಭದ್ರೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಇಂದು ಮುಂಜಾನೆ ಶ್ರೀಸ್ವಾಮಿಗೆ ರುದ್ರಾಭಿಷೇಕ, 7ಕ್ಕೆ ಮಹಾರಾಜಪೇಟೆಯಿಂದ ಗುಗ್ಗಳದ ನಂತರ ಕೆಂಡಾದರ್ಚನೆ ದೇವಸ್ಥಾನದಲ್ಲಿ ನಡೆಯಲಿದೆ. ಎಡೆಯೂರು ಕ್ಷೇತ್ರದ ಶ್ರೀ ರೇಣುಕಾ ಶಿವಾಚಾರ್ಯ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸುವರು ಎಂದು ಸೇವಾ ಟ್ರಸ್ಟ್ ಕಮಿಟಿ ಶ್ರೀ ವೀರಯ್ಯ ಸ್ವಾಮಿ ತಿಳಿಸಿದ್ದಾರೆ.




# ಲಸಿಕೆಯಿಂದ ಹಲವು ಕಾಯಿಲೆಗಳನ್ನು ತಡೆಯಬಹುದು



**ಎಸ್.ಎಸ್. ವೈದ್ಯಕೀಯ ಮಹಾ ವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರದ ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲ ಡಾ. ಬಿ.ಎಸ್. ಪ್ರಸಾದ್**

ದಾವಣಗೆರೆ, ಏ.13- ಲಸಿಕೆಯಿಂದ ತಡೆಗಟ್ಟಬಹುದಾದ ರೋಗಗಳು ಮತ್ತು ಲಸಿಕೆ ನಂತರದ ಪ್ರತಿಕೂಲ ಘಟನೆಗಳ ಕಣ್ಗಾವಲು ಕುರಿತು ಕಾರ್ಯಾಗಾರವನ್ನು ಸಮುದಾಯ ವೈದ್ಯಕೀಯ ವಿಭಾಗ, ವಿಶ್ವ ಆರೋಗ್ಯ ಸಂಸ್ಥೆ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಜಂಟಿ ಸಹಯೋಗದೊಂದಿಗೆ ನಗರದ ಎಸ್.ಎಸ್. ವೈದ್ಯಕೀಯ ಮಹಾ ವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರದಲ್ಲಿ ಇಂದು ನಡೆಸಲಾಯಿತು.

ಎಸ್.ಎಸ್. ವೈದ್ಯಕೀಯ ಮಹಾ ವಿದ್ಯಾಲಯದ ಪ್ರಾಂಶುಪಾಲ ಡಾ. ಬಿ.ಎಸ್. ಪ್ರಸಾದ್ ಮಾತನಾಡಿ, ಲಸಿಕೆಗಳು ಮಗುವಿನ ಜೀವ ಕಾಪಾಡುವ ಸಾಧನಗಳು ಮತ್ತು ಲಸಿಕಾ ನಂತರದ ಪ್ರತಿಕೂಲ ಘಟನೆಗಳ ಕಣ್ಗಾವಲು ಕುರಿತು ಎಲ್ಲಾ ವೈದ್ಯಕೀಯ ಸಿಬ್ಬಂದಿಗಳು ತಿಳಿದುಕೊಳ್ಳಬೇಕೆಂದು ಹೇಳಿದರು.

ವೈದ್ಯಕೀಯ ನಿರ್ದೇಶಕರಾದ ಡಾ. ಅರುಣ್ ಕುಮಾರ್ ಅಜ್ಜಪ್ಪ ಮಾತನಾಡಿ ಮಕ್ಕಳು ಮತ್ತು ವಯಸ್ಕರಲ್ಲಿ ಲಸಿಕೆ ಮಹತ್ವದ ಕುರಿತು ತಿಳಿಸಿದರು

ವಿಶ್ವ ಆರೋಗ್ಯ ಸಂಸ್ಥೆಯ ಡಾ. ಶ್ರೀಧರ್ ಆರ್.ಎಸ್, (ಎಸ್.ಎಮ್ ಓ) ಲಸಿಕೆಯಿಂದ ತಡೆಗಟ್ಟಬಹುದಾದ ರೋಗಗಳ ಕಣ್ಗಾವಲು ಮತ್ತು ಲಸಿಕೆ ನಂತರದ ಪ್ರತಿಕೂಲ ಘಟನೆಗಳ ಕುರಿತು ವಿವರವಾಗಿ ಕಾರ್ಯಾಗಾರದಲ್ಲಿ ಮಾತನಾಡಿದರು.

ಡಾ. ಮೀನಾಕ್ಷಿ ಕೆ.ಎಸ್ (ಆರ್.ಸಿ.ಹೆಚ್. ದಾವಣಗೆರೆ) ದಡಾರ ಮತ್ತು ರುಬೆಲ್ಲಾ ರೋಗಗಳ ನಿವಾರಣೆ ಬಗ್ಗೆ ವಿವರಿಸಿದರು.

ಡಾ. ಕಿರಣ್ ಎಲ್.ಜೆ. ವಿಭಾಗ ಮುಖ್ಯಸ್ಥರು, ಫಾರ್ಮಾಕಾಲಜಿ ಮಾತನಾಡಿ, ಲಸಿಕೆ ನಂತರದ ಪ್ರತಿಕೂಲ ಘಟನೆಗಳಾದ ಸಂದರ್ಭದಲ್ಲಿ ರೋಗಿಯ ಬಗ್ಗೆ ಮಾಹಿತಿ ಮತ್ತು ಪ್ರತಿಕೂಲ ಘಟನೆಗಳ ವರದಿಯನ್ನು ಮೇಲಾಧಿಕಾರಿಗಳಿಗೆ ಸಲ್ಲಿಸುವ ಕುರಿತು ಮಾತನಾಡಿದರು.

ಸಮುದಾಯ ವೈದ್ಯಕೀಯ ವಿಭಾಗದ ಮುಖ್ಯಸ್ಥ ಡಾ. ಅಶ್ವಿನ್ ಕುಮಾರ್, ಮಕ್ಕಳ ತಜ್ಞ ಡಾ. ವಿನಯ್ ಕುಮಾರ್ ಅವರು ಲಸಿಕೆಯಿಂದ ತಡೆಗಟ್ಟಬಹುದಾದ ರೋಗಗಳ ಕಣ್ಗಾವಲು ಮಹತ್ವವನ್ನು ತಿಳಿಸಿದರು.

ಹಾವೇರಿ ಸಮುದಾಯ ವೈದ್ಯಕೀಯ ವಿಭಾಗದ ಪ್ರಾಧ್ಯಾಪಕರಾದ ಡಾ. ಪಿ. ಶೀಲಾ ಅವರು ವೈದ್ಯಕೀಯ ಆಸ್ಪತ್ರೆಯಲ್ಲಿ ಕಣ್ಗಾವಲು ಬಲಪಡಿಸುವ ಕುರಿತು ಮಾಹಿತಿ ನೀಡಿದರು.

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte